# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ
ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಜುಲೈ 26, 2022

ಸಂಪುಟ : 49 ಸಂಚಿಕೆ : 73 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ನೂತನ ರಾಷ್ಟ್ರಪತಿ ಪ್ರಮಾಣ ವಚನ

### ಬುಡಕಟ್ಟು ಸಂಸ್ಕೃತಿಯನ್ನು ನೆನಪಿಸಿದ ದ್ರೌಪದಿ ಮುರ್ಮು

ನವದೆಹಲಿ, ಜು. 25 – ದ್ರೌಪದಿ ಮುರ್ಮು ಅವರು ನೂತನ ರಾಷ್ಟ್ರಪತಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಬೆಳಿಗ್ಗೆ 10.15ಕ್ಕೆ ನಡೆದ ಕಾರ್ಯಕ್ರಮದಲ್ಲಿ ಮುರ್ಮು ಅವರಿಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಪ್ರಮಾಣ ವಚನ ಬೋಧಿಸಿದರು.

ಪ್ರಮಾಣ ವಚನಕ್ಕೆ ಮುನ್ನ, ನಿರ್ಗಮಿತ ರಾಷ್ಟ್ರಪತಿ ರಾಮನಾಥ ಕೋವಿಂದ್ ಮತ್ತು ನೂತನ ರಾಷ್ಟ್ರಪತಿ ಮುರ್ಮು ಅವರು ವಿಧಿಯುಕ್ತ ಮೆರವಣಿಗೆಯಲ್ಲಿ ಸಂಸತ್ತಿಗೆ ಆಗಮಿಸಿದರು.

ಇದಕ್ಕೂ ಮೊದಲು ರಾಜ್‌ಘಾಟ್‌ಗೆ ತೆರಳಿದ ದ್ರೌಪದಿ ಮುರ್ಮು, ರಾಷ್ಟ್ರಪಿತ ಮಹಾತ್ಮ ಗಾಂಧಿ ಸಮಾಧಿಗೆ ನಮನ ಸಲ್ಲಿಸಿದರು.

ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಧಿಕಾರ ಸ್ವೀಕರಿಸಿದ ನಂತರ ಮಾಡಿದ ಮೊದಲ ಭಾಷಣದಲ್ಲಿ ಅವರು, ಬುಡಕಟ್ಟು ಸಂಸ್ಕೃತಿಗಳ ಬಗ್ಗೆ ಹಲವಾರು ಬಾರಿ ಪ್ರಸ್ತಾಪಿಸಿದ್ದಾರೆ. ಜೋಹರ್ ಬುಡಕಟ್ಟಿನ ಸಾಂಪ್ರದಾಯಿಕ



ಅಭಿವಂದನೆಯೊಂದಿಗೆ ಮಾತು ಆರಂಭಿಸಿದ ಅವರು, ಒಡಿಶಾದ ಸಂತ ಹಾಗೂ ಕವಿ ಭೀಮ್ ಭೋಯಿ ಅವರನ್ನು ಉಲ್ಲೇಖಿಸಿದ್ದಾರೆ. ಸಂತಲ್, ಪೈಕ, ಕೋಲ್ ಹಾಗೂ ಭಿಲ್ ಕ್ರಾಂತಿಗಳ ಮೂಲಕ ನಡೆದ ಸ್ವಾತಂತ್ರ್ಯ ಹೋರಾಟವನ್ನು ಪ್ರಸ್ತಾಪಿಸಿದ್ದಾರೆ.

ಈ ಎಲ್ಲ ಕ್ರಾಂತಿಗಳು ಬುಡಕಟ್ಟು ಸಮುದಾಯದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಗಳಾಗಿವೆ. ಬ್ರಿಟಿಷರ ವಿರುದ್ಧ ಸಿಡಿದೆದ್ದಿದ್ದ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ಅವರ ದೇಶಪ್ರೇಮ ಹಾಗೂ ಸಾಮಾಜಿಕ ಸಬಲೀಕರಣದಿಂದ ನಾವೆಲ್ಲ ಸ್ಫೂರ್ತಿ ಪಡೆಯಬೇಕಿದೆ ಎಂದು ಮುರ್ಮು ಹೇಳಿದ್ದಾರೆ.

## ಆಸ್ತಿ ನೋಂದಣಿ ವಿನಾಯಿತಿ ವಿಸ್ತರಣೆ

### 3 ತಿಂಗಳ ಕಾಲ ವಿಸ್ತರಣೆಗೆ ಮುಂದಾದ ಸರ್ಕಾರ

ಬೆಂಗಳೂರು, ಜು. 25 - ರಾಜ್ಯದಲ್ಲಿ ಆಸ್ತಿ ನೋಂದಣಿಗೆ ನೀಡಿದ ಶೇ. ಹತ್ತರಷ್ಟು ರಿಯಾಯ್ತಿಯನ್ನು ಮುಂದಿನ ಮೂರು ತಿಂಗಳ ಕಾಲ ವಿಸ್ತರಿಸಲು ಸರ್ಕಾರ ಮುಂದಾಗಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್.ಅಶೋಕ್ ಈ ವಿಷಯ ತಿಳಿಸಿದರಲ್ಲದೆ, ನೋಂದಣಿಯಲ್ಲಿ ರಿಯಾಯ್ತಿ ನೀಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ ಹಣ ಹರಿದು ಬರುತ್ತಿದ್ದು ನಿರೀಕ್ಷೆಗೂ ಮೀರಿ ಆದಾಯ ಸಂಗ್ರಹವಾಗಿದೆ ಎಂದರು.

ಈ ವರ್ಷದ ಬಜೆಟ್‌ನಲ್ಲಿ ಆಸ್ತಿ ನೋಂದಣಿಯ ಮೂಲಕ 14 ಸಾವಿರ ಕೋಟಿ ರೂ. ಸಂಗ್ರಹಿಸಲು ಇಲಾಖೆಗೆ ಗುರಿ ನಿಗದಿ ಮಾಡಲಾಗಿತ್ತು. ಆದರೆ, ಈ ಪ್ರಮಾಣವನ್ನು ನಾವು ಅಧಿಕಾರಿಗಳ ಜತೆ ಚರ್ಚಿಸಿ, 15 ಸಾವಿರ ಕೋಟಿ ರೂ.ಗಳಿಗೇರಿಸಿದೆವು ಎಂದು ಹೇಳಿದರು. ಆದರೆ, ಈ ವರ್ಷದ ಮೊದಲ 3 ತಿಂಗಳುಗಳಲ್ಲಿ ಆಸ್ತಿ ನೋಂದಣಿಗೆ ಸಂಬಂಧಿಸಿ ದಂತೆ ಐದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಸಂಗ್ರಹಿಸಲಾಗಿದೆ ಎಂದು ಅಶೋಕ್ ವಿವರ ನೀಡಿದರು. ಈ ಮಧ್ಯೆ ಆಸ್ತಿ ನೋಂದಣಿಯ ಸಂದರ್ಭದಲ್ಲಿ ಸರ್ವರ್ ಸಮಸ್ಯೆ ಪದೇ ಪದೇ ಎದುರಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ತೀರ್ಮಾನಿಸಲಾಗಿದ್ದು, 406 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಗಳನ್ನು ಕಂಪ್ಯೂಟರೀಕರಣಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಸರ್ವರ್ ಸರಿಯಿದ್ದರೆ ಆಪರೇಟರ್ ಸರಿಯಿಲ್ಲ, ಆಪರೇಟರ್ ಸರಿಯಿದ್ದರೆ ಸರ್ವರ್ ಸಿಗುವುದಿಲ್ಲ ಎಂಬ ದೂರುಗಳು ಹೆಚ್ಚಿವೆ. ಇದಕ್ಕೆ ಕಂಪ್ಯೂಟರ್ ಮತ್ತು ಆಪರೇಟರ್ ಬೇರೆ ಬೇರೆ ಕಂಪನಿಗಳಿಂದ ನಿಯುಕ್ತರಾಗಿರುವುದೇ ಕಾರಣ. ಹೀಗಾಗಿ ಇನ್ನು ಮುಂದೆ ಕಂಪ್ಯೂಟರ್‌ಗಳನ್ನು ಒಂದೇ ಸಂಸ್ಥೆ ಪೂರೈಸುವುದಲ್ಲದೆ ಆಪರೇಟರ್ ಕೂಡಾ ಅದೇ ಸಂಸ್ಥೆಯವರಾಗಿರುತ್ತಾರೆ ಎಂದರು.

ಹೀಗೆ ಬಿಓಟಿ ಆಧಾರದ ಮೇಲೆ ಜವಾಬ್ದಾರಿ ಹೊರುವ ಸಂಸ್ಥೆ ಪ್ರತಿ ಆಸ್ತಿ ನೋಂದಣಿಗೆ ಪ್ರತಿಯಾಗಿ ನಿರ್ದಿಷ್ಟ ಪ್ರಮಾಣದ ಶುಲ್ಕ ಪಡೆಯಲಿದೆ ಎಂದ ಅವರು, ಹೀಗೆ ಎಲ್ಲವನ್ನೂ ಒಂದೇ ಸಂಸ್ಥೆಗೆ ವಹಿಸಿಕೊಡುವುದರಿಂದ ಸರ್ಕಾರದ

## ಬೆಂಗಳೂರಿನಲ್ಲಿ ಶಂಕಿತ ಉಗ್ರ ವಶಕ್ಕೆ

### ಅಸ್ಸಾಂ ಮೂಲದ ಅಖ್ತರ್ ಹುಸೇನ್ ಲಷ್ಕರ್ ಬಂಧಿತ

ಬೆಂಗಳೂರು, ಜು. 25 - ಉಗ್ರ ಸಂಘಟನೆಯೊಂದಕ್ಕೆ ಸೇರಿದವನೆಂದು ಹೇಳಲಾದ ಶಂಕಿತ ಉಗ್ರನೊಬ್ಬನನ್ನು ಬೆಂಗಳೂರು ಪೊಲೀಸರು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಉಗ್ರನ ಜೊತೆಗೆ ಇದ್ದ ಸ್ಥಳೀಯ ಸಹಚರರನ್ನು ಸಹ ವಿಚಾರಣೆ ನಡೆದಿದ್ದು, ಅವನು ನಡೆಸಿದ ಚಟುವಟಿಕೆಗಳ ಬಗ್ಗೆ ತನಿಖೆ ನಡೆಯುತ್ತಿದೆ.

ಇತ್ತೀಚೆಗೆ ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕ ಸಂಘಟನೆಗಳ ಜತೆ ಸಂಪರ್ಕ ಹೊಂದಿದ್ದ ಹಾಗೂ ಓಕಳಿಪುರ ಪ್ರದೇಶದಲ್ಲಿ ನೆಲೆಸಿದ್ದ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ ನಂತರ, ಮತ್ತೊಬ್ಬ ಉಗ್ರನನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ. ಅಸ್ಸಾಂ ಮೂಲದ ಅಖ್ತರ್ ಹುಸೇನ್ ಲಷ್ಕರ್ ಬಂಧಿತ ಆರೋಪಿ. ಖಚಿತ ಮಾಹಿತಿ ಮೇರೆಗೆ ಭಾನುವಾರ ರಾತ್ರಿ 8 ಗಂಟೆ ಸುಮಾರಿಗೆ ಸಿಸಿಬಿಯ 30 ಅಧಿಕಾರಿಗಳ ತಂಡ ತಿಲಕ್ ನಗರದ ಮನೆ ಮೇಲೆ ದಾಳಿ ಮಾಡಿದೆ.

ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಕೆಲ ಯುವಕರೊಂದಿಗೆ ಶಂಕಿತ ಉಗ್ರ ಅಖ್ತರ್ ಹುಸೇನ್ ವಾಸ್ತವ್ಯ ಹೂಡಿದ್ದ. ಪೊಲೀಸರು ರೈಡ್ ಮಾಡಿ ಲಷ್ಕರ್ ಉಗ್ರರನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನ ಶ್ರೀರಾಂಪುರದಲ್ಲಿ ಕೆಲ ದಿನಗಳ ಹಿಂದೆ ಉಗ್ರಗಾಮಿ ಪತ್ತೆಯಾಗಿದ್ದ. ಕಾಶ್ಮೀರ ಮೂಲದ ಉಗ್ರಗಾಮಿ ಬೆಂಗಳೂರಿನಲ್ಲಿದ್ದ. ಈ ಬಗ್ಗೆ ಖಚಿತ ಮಾಹಿತಿ ಆಧರಿಸಿ ಕಾಶ್ಮೀರ ಪೊಲೀಸರು ಮತ್ತು ಬೆಂಗಳೂರು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದರು.

## 100 ಕೋಟಿಗೆ ರಾಜ್ಯಸಭಾ ಸ್ಥಾನದ ಆಮಿಷ: ಬಂಧನ

ನವದೆಹಲಿ, ಜು. 25 – ರಾಜ್ಯಸಭಾ ಸ್ಥಾನ ಹಾಗೂ ರಾಜ್ಯಪಾಲರ ಹುದ್ದೆಯ ಸುಳ್ಳು ಆಮಿಷ ಒಡ್ಡಿ 100 ಕೋಟಿ ರೂ.ಗಳ ವಂಚನೆ ಮಾಡಿದ ನಾಲ್ವರನ್ನು ಸಿ.ಬಿ.ಐ. ಬಂಧಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಶೋಧ ಕಾರ್ಯಾಚರಣೆ ನಡೆಸಿದ್ದ ಸಿಬಿಐ, ತಂಡದ ಜಾಲವನ್ನು ಬಯಲಿಗೆ ಎಳೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಓರ್ವ ಆರೋಪಿ ಶೋಧ ಕಾರ್ಯಾಚರಣೆ ವೇಳೆ ಸಿ.ಬಿ.ಐ. ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ. ಈ ಬಗ್ಗೆ ಆತನ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಪ್ರತ್ಯೇಕ ಆರೋಪ ಪಟ್ಟಿ ದಾಖಲಿಸಲಾಗಿದೆ.

ಮಹಾರಾಷ್ಟ್ರದ ಕಮಲಾಕರ್ ಪ್ರೇಮಕುಮಾರ್, ಕರ್ನಾಟಕದ ಬೆಳಗಾವಿಯ ರವೀಂದ್ರ ವಿಠಲ ನಾಯಕ್, ದೆಹಲಿಯ ಮಹೇಂದ್ರ ಪಾಲ್ ಅರೋರ, ಅಭಿಷೇಕ್ ಬೂರ ಹಾಗೂ ಮೊಹಮ್ಮದ್ ಎಜಾಜ್ ಖಾನ್ ಈ ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾನು ಹಿರಿಯ ಸಿ.ಬಿ.ಐ. ಅಧಿಕಾರಿ, ತನಗೆ ಉನ್ನತ ಅಧಿಕಾರಿಗಳ ಸಂಪರ್ಕವಿದೆ ಎಂದು ಪ್ರೇಮಕುಮಾರ್ ಹೇಳಿಕೊಳ್ಳುತ್ತಿದ್ದ. ಯಾವುದೇ ಕೆಲಸ ಇದ್ದರೆ (2ನೇ ಪುಟಕ್ಕೆ)

## ಕರ್ನಾಟಕದಲ್ಲಿ ಮತ್ತೆ ಅಧಿಕಾರ ಹಿಡಿಯಲು ಶ್ರಮ ಅಗತ್ಯ

### ಬೊಮ್ಮಾಯಿಗೆ ಪ್ರಧಾನಿ ಮೋದಿ ಕಿವಿಮಾತು

ಬೆಂಗಳೂರು, ಜು. 25 - ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಬಹಳ ಶ್ರಮ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಿವಿಮಾತು ಹೇಳಿದ್ದಾರೆ.

ದೆಹಲಿಯಲ್ಲಿಂದು ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಜೊತೆ ಪಕ್ಷ ಸಂಘಟನೆ, ಸರ್ಕಾರದ ಕಾರ್ಯಕ್ರಮ ಮತ್ತು ಅಭಿವೃದ್ಧಿ ಹಾಗೂ ಸರ್ಕಾರ ಮತ್ತು ಪಕ್ಷದಲ್ಲಿನ ಸಾಮರಸ್ಯಕ್ಕೆ ಸಂಬಂಧಿಸಿದಂತೆ ಚರ್ಚೆ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ದಕ್ಷಿಣ ಭಾರತದಲ್ಲಿ ಸದ್ಯಕ್ಕೆ ನಮಗಿರುವುದು ಕರ್ನಾಟಕ ಮಾತ್ರ. ಮುಂದಿನ ದಿನಗಳಲ್ಲಿ ನಾವು ವಿಸ್ತರಣೆ ಮಾಡಬೇಕಾದರೆ, ನಾವು ಮತ್ತೆ ಅಧಿಕಾರವನ್ನು ಹಿಡಿಯಲೇಬೇಕು ಎಂದು ಮೋದಿ ಹೇಳಿದ್ದಾರೆ. ಕರ್ನಾಟಕ ವಿಧಾನಸಭೆಗೆ ಚುನಾವಣೆ ಇನ್ನು ಕೇವಲ 9-10 ತಿಂಗಳು ಮಾತ್ರ ಬಾಕಿ ಇದೆ. ಈ ಸಮಯದಲ್ಲಿ ಗೆಲುವಿನ ಗುರಿ ಮುಟ್ಟಲು ಏನೆಲ್ಲ ಮಾಡಬೇಕೆಂಬುದರ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ ತಾವು ಒಂದಷ್ಟು ಸಲಹೆಗಳನ್ನು ಮುಖ್ಯಮಂತ್ರಿಗಳಿಗೆ ಪ್ರಧಾನಿಯವರು ನೀಡಿದ್ದಾರೆ.

ಗೆಲುವಿನ ಗುರಿ ಮುಟ್ಟಲು ಸರ್ಕಾರದ ಕಾರ್ಯಕ್ರಮಗಳೇನು? ಎಂದು ಪ್ರಶ್ನಿಸಿದ್ದಾರೆ. ನಿಮ್ಮಿಂದ ಯಾವುದಾದರೂ ಅಭಿವೃದ್ಧಿ ಕಾರ್ಯಗಳ ಚಾಲನೆಗೆ ನಿಶಾನೆ ದೊರೆತಿಲ್ಲವೇ? ಎಂದೆಲ್ಲಾ ಕೇಳಿದ್ದಾರೆ.

ಇದನ್ನು ಸದುಪಯೋಗಪಡಿಸಿಕೊಂಡ ಮುಖ್ಯಮಂತ್ರಿಗಳು ಕೆಲವು ನೀರಾವರಿ ಯೋಜನೆ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮುಖ ವಿಷಯ ಪ್ರಸ್ತಾಪಿಸಿರುವುದಲ್ಲದೆ, (3ನೇ ಪುಟಕ್ಕೆ)

## ಸಾವಿರಾರು ಹೆರಿಗೆಗಳನ್ನು ಮಾಡಿಸಿದ್ದ ಜಗಳೂರಿನ ಸುಲ್ತಾನ್ ಬಿ ನಿಧನ



ಜಗಳೂರು, ಜು.25- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸುಲ್ತಾನ್ ಬಿ ಇಂದು ಬೆಳಿಗ್ಗೆ ಜಗಳೂರು ಗೊಲ್ಲರಹಟ್ಟಿಯ ಅವರ ಸ್ವಗೃಹದಲ್ಲಿ ನಿಧನರಾದರು.

ತಾಲ್ಲೂಕಿನ ಅತ್ಯಂತ ಚಿರಪರಿಚಿತರು, ತಮ್ಮ ಇಡೀ ಬದುಕಿನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಸಾವಿರಾರು ಹೆರಿಗೆಗಳನ್ನು ಮಾಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜೊತೆಗೆ, ಉರಗ ತಜ್ಞೆಯಾಗಿ ಸಾವಿರಾರು ಹಾವುಗಳನ್ನು ಕಾಡಿಗೆ ಸುರಕ್ಷಿತವಾಗಿ ತಲುಪಿಸಿದ್ದಾರೆ.

## 30ಕ್ಕೆ ಸಿಇಟಿ ಫಲಿತಾಂಶ

ಬೆಂಗಳೂರು, ಜು. 25 - ಜೂನ್ ಮಧ್ಯಭಾಗದಲ್ಲಿ ನಡೆಸಲಾಗಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶವನ್ನು ಇದೇ 30ರಂದು ಪ್ರಕಟಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್. ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿರುವ ಅವರು, ವಿವಿಧ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆದುಕೊಳ್ಳಲು ನಡೆದಿದ್ದ ಸಿಇಟಿ ಪರೀಕ್ಷೆಯನ್ನು ಬಿಗಿ ಭದ್ರತೆ ನಡುವೆ ಕಟ್ಟುನಿಟ್ಟಾಗಿ (3ನೇ ಪುಟಕ್ಕೆ)

## ಖಾಸಗಿ ಶಾಲೆಗಳ ಆಡಳಿತ ಸುಗಮಕ್ಕೆ ಆನ್‌ಲೈನ್ ಕ್ರಮ

### ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಿಕ್ಷಣ ನಿರ್ದೇಶಕ ಎಂ.ಎಸ್. ಪ್ರಸನ್ನಕುಮಾರ್

ದಾವಣಗೆರೆ, ಜು. 25 – ಖಾಸಗಿ ಶಾಲೆಗಳ ಆಡಳಿತ ಸುಗಮಗೊಳಿಸುವ ಮೂಲಕ ಶೈಕ್ಷಣಿಕ ಕಲಿಕೆಗೆ ನೆರವಾಗಲು ಆನ್‌ಲೈನ್ ನೋಂದಣಿ ಸೇರಿದಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ ನಿರ್ದೇಶಕ ಎಂ.ಎಸ್. ಪ್ರಸನ್ನಕುಮಾರ್ ಹೇಳಿದ್ದಾರೆ.

ರುಪ್ಸ ಕರ್ನಾಟಕ ಮತ್ತು ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ (ಡಿ.ಎ.ಎಂ.ಎಸ್.) ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ನಗರದ ಬಂಟರ ಭವನದಲ್ಲಿ ಆಯೋಜಿಸಲಾಗಿದ್ದ 'ಖಾಸಗಿ ಶಾಲೆಗಳ ಶೈಕ್ಷಣಿಕ ಬಲವರ್ಧನೆ' ಕುರಿತ ಚಿಂತನ – ಮಂಥನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಖಾಸಗಿ ಶಾಲೆಗಳ ನೋಂದಣಿ, ಮಾನ್ಯತೆ ಹಾಗೂ ಅನುಮತಿ ನವೀಕರಣಗಳಂತಹ ವಿಷಯಗಳನ್ನು ಸಂಪೂರ್ಣ ಆನ್‌ಲೈನ್ ಮಾಡಲಾಗಿದೆ ಎಂದರು.

ಮುಂದಿನ ಹಂತದಲ್ಲಿ, ಒಂದೇ ಸಂಸ್ಥೆಗೆ ಸೇರಿದ್ದರೂ ಒಂದೇ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ, ಬೇರೆ ಬೇರೆ ವರ್ಷ ನೋಂದಣಿಯಾಗಿರುವ ಶಾಲೆಗಳನ್ನು ಏಕೀಕೃತಗೊಳಿಸಲಾಗುವುದು. ಇದರಿಂದ 1-10ನೇ ತರಗತಿಯವರೆಗೆ ಶಾಲೆಗಳ ಮಾನ್ಯತೆ ನವೀಕರಣ ಸರಳವಾಗಲಿದೆ ಎಂದರು.





ಕೊರೊನಾ ನಂತರ ಸಾಕಷ್ಟು ಜನರು ತಮ್ಮ ಮಕ್ಕಳ ಶಾಲೆಗಳನ್ನು ಬದಲಿಸಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ವಿವರ ದಾಖಲಿಸುವ ಎಸ್.ಎ.ಟಿ.ಎಸ್.ನಲ್ಲಿ ಸಮಸ್ಯೆಯಾಗಿದೆ. ಈ ಸಮಸ್ಯೆಗಳನ್ನೂ ಬಗೆಹರಿಸಲಾಗುವುದು ಎಂದವರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಗ್ನಿಶಾಮಕ ಇಲಾಖೆಯ ಮಹಾ ನಿರ್ದೇಶಕ ಡಾ. ಅಮರ್ ಕುಮಾರ್ ಪಾಂಡೆ, ಮಕ್ಕಳು ಶಾಲೆಗೆ ಬಂದಾಗ ಸುರಕ್ಷಿತವಾಗಿ ನೋಡಿಕೊಳ್ಳುವುದು ಶಾಲೆಗಳ ಕರ್ತವ್ಯ. ಇದಕ್ಕಾಗಿಯೇ ಅಗ್ನಿ ಸುರಕ್ಷತಾ ಅನುಮತಿ ಕಡ್ಡಾಯಗೊಳಿಸಲಾಗಿದೆ ಎಂದರು.

ಗ್ರಾಮೀಣ ಖಾಸಗಿ ಶಾಲೆಗಳಿಗೆ ಕೇವಲ 1 ಸಾವಿರ ರೂ.ಗಳಷ್ಟು ಕಡಿಮೆ ಅಗ್ನಿ ಸುರಕ್ಷತಾ ಶುಲ್ಕ ನಿಗದಿ ಪಡಿಸಲಾಗಿದೆ. ಜಿಲ್ಲಾ ಮಟ್ಟದಲ್ಲೇ ಪ್ರಮಾಣ ಪತ್ರ ಕೊಡಿಸಲು ದೇಶದಲ್ಲಿ ಮೊದಲ ಬಾರಿಗೆ ಠಾಣಾಧಿಕಾರಿಗೂ ಪರಿಶೀಲನೆ ಅಧಿಕಾರ ನೀಡಲಾಗಿದೆ ಎಂದರು.

ಸಮಾರಂಭದ (3ನೇ ಪುಟಕ್ಕೆ)

### ಪ್ರತಿಭಾವಂತರಿಗೆ ತರಬೇತಿ, ಟಾಪರ್‌ಗಳ ದತ್ತು

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಗಳಲ್ಲಿ ಮೊದಲ ಮೂರು ಸ್ಥಾನ ಪಡೆಯುವವರ ಮನೆಗೆ ಸ್ವತಃ ಡಿಡಿಪಿಐ ತೆರಳಿ ಸನ್ಮಾನಿಸುವ ಪದ್ಧತಿ ಇದೆ. ಅಲ್ಲದೇ ಅವರ ಮುಂದಿನ ಶಿಕ್ಷಣದ ಹೊಣೆಯನ್ನೂ ಅಲ್ಲಿನ ಜಿಲ್ಲಾ ಸಚಿವರೇ ಹೊತ್ತುಕೊಳ್ಳುತ್ತಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣದ ನಿರ್ದೇಶಕ ಎಂ.ಎಸ್. ಪ್ರಸನ್ನಕುಮಾರ್ ಹೇಳಿದ್ದಾರೆ.

ಆ ಜಿಲ್ಲೆಯ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮಗಳಲ್ಲಿ ಪ್ರತಿಭಾವಂತರಾಗಿರುವ ತಲಾ 30 ವಿದ್ಯಾರ್ಥಿಗಳನ್ನು ಮೊದಲೇ ಆಯ್ಕೆ ಮಾಡಿ ವಿಶೇಷ ತರಬೇತಿ ನೀಡಲಾಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳು ರ್‍ಯಾಂಕ್ ಹಂತಕ್ಕೆ ಬರಲು ಸಾಧ್ಯವಾಗುತ್ತದೆ. ಇಂತಹ ಪದ್ಧತಿಗಳನ್ನು ಬೇರೆ ಜಿಲ್ಲೆಯವರೂ ಅಳವಡಿಸಿಕೊಳ್ಳಬಹುದು ಎಂದವರು ತಿಳಿಸಿದರು.

## ರಾಷ್ಟ್ರಪತಿಯಿಂದ ಅಡುಗೆ ಮನೆಯವರೆಗೆ ಸ್ತ್ರೀಯರ ಪಾದಾರ್ಪಣೆ



ಮಲೇಬೆನ್ನೂರು, ಜು.25- ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿಯಿಂದ ಹಿಡಿದು ಅಡುಗೆ ಮನೆವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ಸ್ತ್ರೀಯರು ಪಾದಾರ್ಪಣೆ ಮಾಡಿದ್ದಾರೆ ಎಂದು ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಶ್ಲಾಘಿಸಿದರು.

ನಂದಿಗುಡಿಯ ವೃಷಭಪುರಿ ಮಹಾಸಂಸ್ಥಾನ ಬೃಹನ್ಮಠದ ಸಮುದಾಯ ಭವನದಲ್ಲಿ ಭಾನುವಾರ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ವೇದಿಕೆಯ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ, ಹಡಪದ ಅಪ್ಪಣ್ಣ ಜಯಂತಿ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಈ ಹಿಂದೆ ಮಹಿಳೆ ಅಡುಗೆ ಮನೆಗೆ ಮಾತ್ರ ಸೀಮಿತ ಎನ್ನುವ ಕಾಲವಿತ್ತು. ಆದರೆ, ಈಗ ಹಾಗಿಲ್ಲ. ಈಗಿನ ಮಹಿಳೆಯರು ರಾಜಕೀಯ, ಶಿಕ್ಷಣ, ಅಂತರಿಕ್ಷ ಯಾನ, ಪೊಲೀಸ್ ಇಲಾಖೆ, ಮಿಲಿಟರಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡಿದ್ದಾರೆ ಎಂದರು.

ಶರಣ ಸಾಹಿತ್ಯ ಪರಿಷತ್ತಿನ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷ ಕೊಂಡಜ್ಜಿ ವೀರಣ್ಣ ಮಾತನಾಡಿ, ಇಂದಿನ ಮಕ್ಕಳು ಮೊಬೈಲ್‌ಗೆ (2ನೇ ಪುಟಕ್ಕೆ)

## ಹರಿಹರ: ಗ್ರಾಮಗಳಿಗೆ ಶುದ್ಧ ನೀರು ಸರಬರಾಜು ಮಾಡಿ

ಹರಿಹರ, ಜೂ. 25 - ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಬೋರ್‌ವೆಲ್ ಮತ್ತು ಹೊಳೆಯ ನೀರನ್ನು ಮಿಶ್ರಣ ಮಾಡಿ ಸರಬರಾಜು ಮಾಡುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದೆ ಎಂದು ಅನೇಕ ಗ್ರಾಮಸ್ಥರು ದೂರಿದ್ದಾರೆ. ಆದಷ್ಟು ಬೇಗ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಮಾಡಬೇಕು. ತಡ ಮಾಡಿದರೆ ನಾನೇ ಸ್ಥಳಕ್ಕೆ ಭೇಟಿ ಕೊಟ್ಟು ನಿರ್ಲಕ್ಷ್ಯ ತೋರಿದ ಸಿಬ್ಬಂದಿ ಮೇಲೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಜಿಲ್ಲಾ ಪಂಚಾಯತಿ ಲೆಕ್ಕಾಧಿಕಾರಿ ಸೌಮ್ಯಶ್ರೀ ಹೇಳಿದರು.

ನಗರದ ತಾ.ಪಂ ಕಚೇರಿಯ ಸಭಾಂಗಣದಲ್ಲಿ ಶಾಸಕ ಎಸ್. ರಾಮಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ತಾ.ಪಂ. ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಬೋರ್‌ವೆಲ್ ಮತ್ತು ನದಿ ನೀರನ್ನು ಎರಡು ಸೇರಿ ಸರಬರಾಜು ಮಾಡುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಹೆಚ್ಚಾಗಿದೆ. ಯಾವುದಾದರೂ ಒಂದು ನೀರಿನ ಸರಬರಾಜು ಮಾಡಿ ಎಂದು ಹೇಳಿದರು.

ಗುತ್ತಿಗೆದಾರ ಕಾಮಗಾರಿ ಪೂರ್ಣಗೊಳಿಸಿದ ನಂತರವೇ ಬಿಲ್ ಪಾವತಿಸಬೇಕು. ಸಣ್ಣ ಪುಟ್ಟ ಕೆಲಸ ಪೂರ್ಣಗೊಳಿಸಲಿಕ್ಕೆ



### ತಾ.ಪಂ. ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ

ಗುತ್ತಿಗೆದಾರರು ವಿಳಂಬ ಮಾಡುತ್ತಾರೆ ಎಂದವರು ತಿಳಿಸಿದರು.

ತಾಲ್ಲೂಕಿನಲ್ಲಿ ಮಂಕಿ ಪಾಕ್ಸ್ ಜೊತೆಗೆ ಕೊರೊನಾ, ಡೆಂಗ್ಯೂ, ಮಲೇರಿಯಾ, ಸೇರಿದಂತೆ ಯಾವುದೇ ರೋಗಗಳು ಹೆಚ್ಚಾಗದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಬಹಳ ಮುತುವರ್ಜಿಯಿಂದ ಕರ್ತವ್ಯ ನಿರ್ವಹಣೆ ಮಾಡುವಂತೆ ಹೇಳಿದರು.

ತಾಲ್ಲೂಕಿನ ಹಾಸ್ಟೆಲ್‌ಗಳಲ್ಲಿ ಊಟದ ಬಗ್ಗೆ ಗಮನ ಹರಿಸಬೇಕು. ಹಾಸ್ಟೆಲ್ ಆಹಾರದ ಬಗ್ಗೆ ವಿದ್ಯಾರ್ಥಿಗಳ ದೂರಿದೆ. ಸ್ಥಳೀಯ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ಕೊಟ್ಟು ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ತಿಳಿಸಿದರು.

ತಾಪಂ ಇ.ಓ. ಗಂಗಾಧರನ್ ಮಾತನಾಡಿ, ತಾಲ್ಲೂಕಿನ 18 ಅಡುಗೆ ಕೋಣೆಯ ದುರಸ್ತಿ ಕಾರ್ಯ ಆಗಬೇಕಿದೆ. ತಾಲ್ಲೂಕಿನಲ್ಲಿ ಅಕ್ರಮ ಅಕ್ಕಿ ಸಾಗಾಟ ಮಾಡುವವರ ಮೇಲೆ ಯಾವ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಇದೆ ಎಂಬುದನ್ನು ಆಹಾರ ನಿರೀಕ್ಷಕರು ತಿಳಿದುಕೊಳ್ಳದೇ ಇರೋದರಿಂದ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಕ್ರಮ ಅಕ್ಕಿ ಸಾಗಾಟ ಆಗುವುದಕ್ಕೆ ಕಾರಣ ಎಂದು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕ ನಾರನಗೌಡ ಮಾತನಾಡಿ, ಕಳೆದ ಬಾರಿ ಮಳೆ ಹಾನಿಯಿಂದ ಸುಮಾರು 1673 ಹೆಕ್ಟೇರ್ ಜಮೀನಿನ ಮಾಲೀಕರಿಗೆ ನೇರವಾಗಿ ಅವರ ಖಾತೆಗೆ ಹಣ ಜಮಾ ಮಾಡಲಾಗಿದೆ. ಇತ್ತೀಚೆಗೆ ಬಿದ್ದಿರುವ ಮಳೆಯಿಂದಾಗಿ 407 ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದ್ದು ಅವರಿಗೂ ಸಹ ಶೀಘ್ರದಲ್ಲಿ ಹಣ ಜಮಾ ಆಗಲಿದೆ ಎಂದು (2ನೇ ಪುಟಕ್ಕೆ)


## ಕೈಲಾಸ ಶಿವಗಣಾರಾಧನೆ



ಚನ್ನಗಿರ ತಾ, ವಡ್ಡನಹಾಳು ಗ್ರಾಮದ ಹಾಲಿ ದಾವಣಗೆರೆ ವಾಸಿ,
ಶ್ರೀಮತಿ ಪ್ರೇಮಲೀಲಾ ವಿ.ಸಿ ಮತ್ತು ಮಕ್ಕಳು,
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 22.7.2022ನೇ ಶುಕ್ರವಾರ
ಮಧ್ಯರಾತ್ರಿ 1.44 ಗಂಟೆಗೆ ನನ್ನ ಪತಿಯವರಾದ

**ಶ್ರೀ ವಿ.ಜಿ ಲೋಕೇಶ್**
(Retired Supt. Engineer)
ಅವರು ದೈವಾಧೀನರಾದ ಪ್ರಯುಕ್ತ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 26.7.2022ನೇ ಮಂಗಳವಾರ ಬೆಳಿಗ್ಗೆ 11ಕ್ಕೆ
ಸ್ಥಳ : ಷ॥ಬ್ರ॥ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು
ಎಂಸಿಸಿ 'ಬಿ' ಬ್ಲಾಕ್ ಶಿವಾಚಾರ್ಯ ನಿಕೇತನ ಹಿರೇಮಠ
ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳ ಆಗಮಿಸಿ, ಮೃತರ ಆತ್ಮಕ್ಕೆ
ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಪ್ರೇಮಲೀಲಾ ಮತ್ತು ಮಕ್ಕಳು, ವಂಶಸ್ಥರು ಉಪ್ಪರಿಗೆ ವಂಶಸ್ಥರು ತಾಳ್ಯ, ವಡ್ಡನಹಾಳು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ : 63622 31733

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ಮಂತ್ರಿ ಸ್ಥಾನ ಬೇಡ, ಕ್ಷೇತ್ರದ ಅಭಿವೃದ್ದಿಗೆ ಹಣ ಕೊಡಿ

## ಕುಂಕುವ ಗ್ರಾಮದಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದಲ್ಲಿ ಎಂ.ಪಿ.ರೇಣುಕಾಚಾರ್ಯ



ನ್ಯಾಮತಿ, ಜು.25- ನಾನು ಹುಲಿನೂ ಅಲ್ಲ, ಸಿಂಹನೂ ಅಲ್ಲ, ನಾನು ಅವಳಿ ತಾಲ್ಲೂಕಿನ ಜನರ ಸೇವಕ. ಕೊನೆ ಉಸಿರಿರುವವರೆಗೂ ಅವಳಿ ತಾಲ್ಲೂಕಿನ ಸೇವಕನಾಗೇ ಇರುತ್ತೇನೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾ ಚಾರ್ಯ ಹೇಳಿದರು.

ತಾಲ್ಲೂಕಿನ ಕುಂಕುವ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮ ಇದಾಗಿದ್ದು, ಅಧಿಕಾರಿಗಳು ಎಸಿ ಕಚೇರಿಯಲ್ಲಿ ಕುಳಿತು ಕೆಲಸ ಮಾಡುವ ಬದಲು ಜನರ ಮನೆ ಬಾಗಿಲಿಗೆ ಬಂದು ಅವರ ಕಷ್ಟವನ್ನು ಕೇಳಿ ಸ್ಥಳದಲ್ಲೇ ಅವುಗಳಿಗೆ ಪರಿಹಾರ ನೀಡುವ ಮೂಲಕ ಜನರು ಸರ್ಕಾರಿ ಕಚೇರಿಗೆ ಅಲೆಯುವುದನ್ನು ತಪ್ಪಿಸಿದಂತಾಗಿದೆ ಎಂದರು.

ನನ್ನ ಬಗ್ಗೆ ಟೀಕೆ ಮಾಡುವವರು ಮಾಡಲಿ ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಾನು ನಿಮ್ಮ ಪ್ರೀತಿಯ ಪಳಗಿಸಿದ ಆನೆ, ತಾಲ್ಲೂಕಿನ ಜನರೇ ನನಗೆ ಅಂಕುಶ ಎಂದರು.

ಕಳೆದ ಕೆಲ ದಿನಗಳ ಹಿಂದೆ ಸುರಿದ ಮಳೆ ಯಿಂದಾಗಿ ಅವಳಿ ತಾಲ್ಲೂಕಿನಾದ್ಯಂತ 4162.5 ಎಕರೆ ಬೆಳೆ ನಷ್ಟ ಉಂಟಾಗಿದ್ದು, ಸೋಮವಾರ ಅಧಿಕಾರಿಗಳ ಸಭೆ ಕರೆದಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಬೆಳೆ ಕಳೆದು ಕೊಂಡವರಿಗೆ, ಮನೆ ಹಾನಿಯಾದವರಿಗೆ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ವಸತಿ ಸಚಿವ ವಿ.ಸೋಮಣ್ಣ ಅವರ ಬಳಿ 2130 ಹೆಚ್ಚುವರಿ ಮನೆಗಳನ್ನು ಕೇಳಿದ್ದು, ಅವರು ಮನೆಗಳನ್ನು ನೀಡಿದ್ದಾರೆ ಎಂದರು.

**ಅದ್ದೂರಿ ಮೆರವಣಿಗೆ :** ಕಾರ್ಯಕ್ರಮಕ್ಕೆ ಎಂ.ಪಿ.ರೇಣುಕಾಚಾರ್ಯ ಆಗಮಿಸುತ್ತಿದ್ದಂತೆ, ಎತ್ತಿನ ಬಂಡಿಯಲ್ಲಿ ಅವರನ್ನು ಗ್ರಾಮದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆಯ ಮೂಲಕ ವೇದಿಕೆಗೆ ಕರೆ ತರಲಾಯಿತು. ಮಹಿಳೆಯರು ಪೂರ್ಣಕುಂಭ ದೊಂದಿಗೆ ಶಾಸಕರನ್ನು ಬರ ಮಾಡಿಕೊಂಡರೆ, ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಗಮನ ಸೆಳೆದವು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ತಿಮ್ಮಣ್ಣ ಹುಲ್ಲುಮನಿ, ತಹಶೀಲ್ದಾರ್ ರೇಣುಕಾ, ಇಓ ರಾಮಾಭೋವಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಗ್ರಾ.ಪಂ ಅಧ್ಯಕ್ಷರು, ಉಪಾಧ್ಯಕ್ಷರು ಸದಸ್ಯರಿದ್ದರು.

# ರೈತ ಸಂಘದಿಂದ ರಸ್ತೆ ತಡೆ ಚಳವಳಿ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು. 25- ಎರಡು ವರ್ಷದ ಬೆಳೆ ವಿಮೆ, ಯೂನಿಯನ್ ಬ್ಯಾಂಕ್ ನಲ್ಲಿ ಓಟಿಎಸ್ ಹಾಗೂ ಯೂರಿಯಾ ಗೊಬ್ಬರ ಪೂರೈಕೆ ಈ ಮೂರು ಬೇಡಿಕೆಗಳೊಂದಿಗೆ ಇಲ್ಲಿನ ಕರ್ನಾಟಕ ರಾಜ್ಯ ರೈತ ಸಂಘ ಸೋಮವಾರ ರಸ್ತೆಗಿಳಿದು ಪ್ರತಿಭಟನೆ ನಡೆಸಿತು. ಶೀಘ್ರವೇ ಕ್ರಮ ಜರುಗಿಸದಿದ್ದರೆ ಆಗಸ್ಟ್ 22 ರಂದು ರಾಣೇಬೆನ್ನೂರು ಬಂದ್ ಕರೆಯುವುದಾಗಿ ಎಚ್ಚರಿಸಿದ ರೈತ ಸಂಘದ ಮುಖಂಡರು ಸರ್ಕಾರಕ್ಕೆ ಸೀಮಿತ ಅವಧಿ ನೀಡಿದ ಮನವಿಯನ್ನು ರಾಜ್ಯಪಾಲರಿಗೆ ಕಳಿಸಿದರು.

ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರ ತವರು ಜಿಲ್ಲೆಯಲ್ಲಿ 125 ದಿನಗಳಿಂದ ಓಟಿಎಸ್ ಗಾಗಿ ರೈತರು ವಿವಿಧ ರೀತಿಯಲ್ಲಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಭೀಕರ ಮಳೆಯಿಂದ ಇಲ್ಲಿನ ರೈತರು ಸಂಕಟದಿಂದ ಪರಿತಪಿಸುತ್ತಿದ್ದರೂ ಎರಡು ವರ್ಷಗಳಿಂದ ಬೆಳೆ ವಿಮೆ ಕೊಟ್ಟಿಲ್ಲ. ಗೊಬ್ಬರದ ಕೊರತೆ, ಈ ಎಲ್ಲ ಸಮಸ್ಯೆಗಳಿಂದ ರೈತರು ಹೈರಾಣಾಗಿದ್ದರೂ ಸರ್ಕಾರ ಕ್ಯಾರೆ ಎನ್ನುತ್ತಿಲ್ಲ ಎಂದು ಮುಖಂಡರು ಆರೋಪಿಸಿದರು.

ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟ ರೈತರು ಬಸ್ ಸ್ಟ್ಯಾಂಡ್ ಬಳಿ ರಸ್ತಾ ರೋಖೋ ನಡೆಸಿ, ತಹಶೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಹಾಗೂ ಇಲಾಖೆಗಳಿಗೆ ಸಲ್ಲಿಸಿದ ಮನವಿಯನ್ನು ಈ ತಕ್ಷಣದಲ್ಲಿ ಹಿರಿಯ ಅಧಿಕಾರಿಗಳಿಗೆ ಕಳಿಸುವುದಾಗಿ ಕೃಷಿ ಉಪ ನಿರ್ದೇಶಕ ಹಿತೇಂದ್ರ ಗೌಡಪ್ಪಳವರ ಹೇಳಿದರು.

ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ, ಬಸವರಾಜ ಕೊಂಗಿ, ಬಸವರಾಜ ಸಾದರ, ಬಾಬು ಸಾಬ, ಹೆಚ್. ಬಿ. ಕಣವಿ, ಬಿ.ಎಸ್. ಹುಲ್ಲತ್ತಿ, ಮಾಲತೇಶ ಹಮ್ಮಗಿ, ಬಿ.ಜಿ. ಕೋಪರ್ಡೆ ಮತ್ತಿತರರಿದ್ದರು.

# ಜನಪರ ಕಾರ್ಯಗಳಿಗೆ ವಿದ್ಯೆ ಮಾನದಂಡವಲ್ಲ



**ಹುಟ್ಟುಹಬ್ಬಕ್ಕೆ ಬುಕ್, ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮದಲ್ಲಿ ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ**

ರಾಣೇಬೆನ್ನೂರು, ಜು. 25- ದಾನ, ಧರ್ಮ, ಪರೋಪಕಾರ ಮುಂತಾದವುಗಳನ್ನು ಮಾಡಲು ವಿದ್ಯಾವಂತರು ಬೇಕಾಗಿಲ್ಲ. ಬಡವರತ್ತ ಬಾಗುವ ಗುಣವುಳ್ಳ ಧನಿಕರು ಬೇಕಾಗಿದ್ದಾರೆ ಎಂದು ಶಿರಹಟ್ಟಿ ಫಕೀರ ದಿಂಗಾಲೇಶ್ವರ ಶ್ರೀಗಳು ನುಡಿದರು.

ಎಪಿಎಂಸಿ ಮಾಜಿ ನಿರ್ದೇಶಕ ಪರಮೇಶ ಗೂಳಣ್ಣನವರು ತಮ್ಮ ಜನ್ಮದಿನೋತ್ಸವದಂದು ಸರ್ಕಾರಿ ಶಾಲೆಯ 4 ಸಾವಿರ ಮಕ್ಕಳಿಗೆ ನೀಡಿದ ನೋಟ್ ಬುಕ್, ಶಾಲಾ ಬ್ಯಾಗ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಹೊಲಗೆಲಸ ಮಾಡುವ ತಂದೆ-ತಾಯಂದಿರಿಂದ ತಮ್ಮ ಮೊಬೈಲ್‌ಗಳಿಗೆ ಕರೆನ್ಸಿ ಹಾಕಿಸಿಕೊಳ್ಳುವ ವಿದ್ಯಾವಂತರೂ ಇದ್ದಾರೆ. ತಾಲ್ಲೂಕಲ್ಲದ ಲಕ್ಷ್ಮೇಶ್ವರ ಪಟ್ಟಣಕ್ಕೆ ತಾಲ್ಲೂಕು ಮಟ್ಟದ ಇಲಾಖೆಗಳನ್ನು ತಂದ ಅಕ್ಷರಗಳ ಅರಿವು ಇಲ್ಲದ ಮಾಜಿ ಶಾಸಕ ಉಪನಾಳ ಗೂಳಪ್ಪನಂತಹ ಅನಕ್ಷರಸ್ಥರೂ ಇದ್ದಾರೆ. ಜನಪರ ಕಾರ್ಯಗಳನ್ನು ಮಾಡುವ ಶ್ರೀಮಂತ ಹೃದಯಗಳು ಬೇಕು ಎಂದು ಶ್ರೀಗಳು ನುಡಿದರು.

ವಿದೇಶಿ ಸಂಸ್ಕೃತಿಯ ಜನ್ಮ ದಿನಗಳನ್ನು ಆಚರಿಸಿ ಕೊಳ್ಳುವ ಈ ದಿನಗಳಲ್ಲಿ ಸಮಾಜಮುಖಿ ಕಾರ್ಯಗಳ ಮೂಲಕ ಆಚರಿಸಿಕೊಳ್ಳುವ ಜನ್ಮದಿನೋತ್ಸವ ಮಾದರಿ ಯಾಗಿದೆ ಎಂದು ಹೇಳಿದ ಶಾಸಕ ಅರುಣಕುಮಾರ, ಆರ್. ಶಂಕರ್, ಬಿಜೆಪಿಯ ಡಾ. ಬಸವರಾಜ ಕೇಲಗಾರ, ಭಾರತಿ ಜಂಬಗಿ, ಚೋಳಪ್ಪ ಕಸವಾಳ, ಕಾಂಗ್ರೆಸ್‌ನ ಪ್ರಕಾಶ್ ಕೋಳಿವಾಡ, ಏಕನಾಥ ಬಾನುವಳ್ಳಿ, ಸಣ್ಣತಮ್ಮಪ್ಪ ಬಾರ್ಕಿ, ಜೆ.ಎಸ್. ಕರೇಗೌಡ್ರ, ಸಾಧು ವೀರಶೈವ ಸಮಾಜದ ಮಾಜಿ ಅಧ್ಯಕ್ಷ ಮಲ್ಲೇಶಣ್ಣ ಅರಕೇರಿ ಅವರು ಪರಮೇಶ ಗೂಳಣ್ಣನವರಿಗೆ ಶುಭ ಕೋರಿದರು.

ಚಳಗೇರಿಯಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ವೃದ್ಧ ದಂಪತಿಗಳಾದ ಪೈಲ್ವಾನ್ ಬಸಪ್ಪ ಗೂಳಣ್ಣನವರ ಹಾಗೂ ಗೌರಮ್ಮ ವಹಿಸಿದ್ದರು.

ಚಳಗೇರಿಯ ಡಾ. ಮಹಾಂತೇಶ್ವರ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಮಲ್ಲಿಕಾರ್ಜುನ ಅಂಗಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಗ್ರಾ.ಪಂ. ಅಧ್ಯಕ್ಷೆ ಪ್ರಮೀಳಾ ಬಸವಂತಣ್ಣ, ಸಂತೋಷ ಪಾಟೀಲ, ಶಿವ ಕುಮಾರ ನರಸಗೊಂಡರ, ಸೋಮು ಗೌಡಶಿವಣ್ಣನವರ, ಲೋಕೇಶ ನರಸಗೊಂಡರ, ಅಶೋಕ ಗಂಗನಗೌಡ್ರ, ಶಿಕ್ಷಣಾಧಿಕಾರಿ ಗುರುಪ್ರಸಾದ ಮತ್ತಿತರರಿದ್ದರು.

ಇದೇ ಸಂದರ್ಭದಲ್ಲಿ ಕರಾಟೆಯಲ್ಲಿ ಬಂಗಾರ ಪದಕ ಪಡೆದ ರಕ್ಷಿತಾ ಅವರುಗಳನ್ನು ಗೌರವಿಸಲಾಯಿತು.

# ಶುದ್ಧ ನೀರು ಸರಬರಾಜು ಮಾಡಿ

(1ನೇ ಪುಟದಿಂದ) ಹೇಳಿದರು.

ಆಹಾರ ನಿರೀಕ್ಷಕ ರಮೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಸುಮಾರು 315 ಸರ್ಕಾರಿ ನೌಕರರು ಬಿಪಿಎಲ್ ಪಡಿತರ ಚೀಟಿಯನ್ನು ಪಡೆದಿದ್ದರು. ಅವರಿಂದ 13 ಲಕ್ಷ ರೂಪಾಯಿ ದಂಡವನ್ನು ವಸೂಲಿ ಮಾಡಿ, ಅದರಲ್ಲಿ ನಿವೃತ್ತಿ ಹೊಂದಿದವರನ್ನು ಬಿಟ್ಟು, ಉಳಿದವರಿಗೆ ಬಿಪಿಲ್ ಕಾರ್ಡ್ ಬದಲಿಸಿ ಎಪಿಎಲ್ ಕಾರ್ಡ್ ನೀಡಲಾಗಿದೆ ಎಂದರು.

ನ್ಯಾಯಬೆಲೆ ಅಂಗಡಿ ಉಸ್ತುವಾರಿಗೆ 88 ಹಳ್ಳಿಗಳು ಸೇರಿ ಮೂವರು ಸಿಬ್ಬಂದಿ ಮಾತ್ರ ಇದ್ದೇವೆ. ಹೀಗಾಗಿ ಅಕ್ರಮ ಅಕ್ಕಿ ಸಾಗಣೆ ತಡೆಯಲು ಆಗುತ್ತಿಲ್ಲ ಎಂದು ಹೇಳಿದರು. ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್ ಮಾತನಾಡಿ, ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸಿರುವ ಬಗ್ಗೆ ತಿಳಿಸಿದರು.

ಬೆಸ್ಕಾಂ ಇಲಾಖೆ ಎಇಇ ಲಕ್ಷ್ಮಪ್ಪ ಮಾತನಾಡಿ, ರೈತರು 5 ಹೆಚ್.ಪಿ. ವಿದ್ಯುತ್ ಸರಬರಾಜಿಗೆ ಅನುಮತಿ ಪಡೆದು 10 ಹೆಚ್.ಪಿ. ಆಗುವಷ್ಟು ವಿದ್ಯುತ್ ಬಳಕೆ ಮಾಡುತ್ತಿದ್ದಾರೆ. ಹಾಗಾಗಿ ವಿದ್ಯುತ್ ಮೋಟಾರು ಹಾನಿಯಾಗುತ್ತವೆ ಎಂದರು. ಸಾರ್ವಜನಿಕ ಆಸ್ಪತ್ರೆಯ ಡಾ. ಹನುಮನಾಯ್ಕ್, ತೋಟಗಾರಿಕೆ ಇಲಾಖೆ ಎಇಇ ರೇಖಾ, ಪಶುಸಂಗೋಪನೆ ಇಲಾಖೆಯ ಕೆ.ಟಿ. ಸಿದ್ದೇಶ್, ಗ್ರೇಡ್2 ತಹಶೀಲ್ದಾರ್ ಶಶಿಧರಯ್ಯ, ಸಮಾಜ ಕಲ್ಯಾಣ ಇಲಾಖೆಯ ನಾಸಿರ್ ಉದ್ದೀನ್, ಅಕ್ಷರ ದಾಸೋಹ ಇಲಾಖೆಯ ರಾಮಕೃಷ್ಣಪ್ಪ, ಗ್ರಾಮೀಣ ನೀರು ಸರಬರಾಜು ಇಲಾಖೆಯ ಜಾಕೀರ್ ಹಾಗೂ ಇತರರು ಮಾಹಿತಿ ನೀಡಿದರು.

ಹಿಂದುಳಿದ ವರ್ಗಗಳ ಇಲಾಖೆ ಫರವೀನ್ ಬಾನು, ಗಿರೀಶ್, ಶ್ರೀಧರ್, ತಾಪಂ ಲೆಕ್ಕಾಧಿಕಾರಿ ಲಿಂಗರಾಜ್ ಹಾಗೂ ಇತರರು ಹಾಜರಿದ್ದರು.

# ಸುಲ್ತಾನ್ ಬಿ ನಿಧನಕ್ಕೆ ಜಿಲ್ಲಾ ಕಸಾಪ ಶೋಕ

ದಾವಣಗೆರೆ, ಜು.25- ಜಗಳೂರು ಗೊಲ್ಲರಹಟ್ಟಿಯವರಾದ ನಾಡಿನ ಹಿರಿಯ ಸಾಧಕರಲ್ಲಿ ಒಬ್ಬರಾಗಿದ್ದ ಶ್ರೀಮತಿ ಸುಲ್ತಾನ್ ಬಿ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ತಮ್ಮ ಜೀವಮಾನವನ್ನೇ ಸಮಾಜ ಸೇವೆಗಾಗಿ ಮುಡುಪಾಗಿಟ್ಟಿದ್ದ, ಸೂಲಗಿತ್ತಿ ಹಾಗೂ ನಾಟಿ ವೈದ್ಯರೆಂದೇ ಹೆಸರಾಗಿದ್ದ ಸುಲ್ತಾನ್ ಬಿ ಅವರ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು ಎಂದು ಅವರು ಹೇಳಿದ್ದಾರೆ.

ಹಲವು ತಿಂಗಳಿಂದಷ್ಟೇ ಅವರ ಗ್ರಾಮಕ್ಕೆ ಹೋಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸುಲ್ತಾನ್ ಬಿ ಅವರನ್ನು ಸನ್ಮಾನಿಸಿ ಗೌರವಿಸಿದ್ದನ್ನು ವಾಮದೇವಪ್ಪ ಅವರು ಸ್ಮರಿಸಿದ್ದಾರೆ.

# ರಾಷ್ಟ್ರಪತಿಯವರೆಗೆ ಸ್ತ್ರೀಯರ ಪಾದಾರ್ಪಣೆ



(1ನೇ ಪುಟದಿಂದ) ಅಂಟಿಕೊಳ್ಳುತ್ತಿದ್ದು, ವಚನ ಸಾಹಿತ್ಯದ ಕಡೆ ನಿರಾಸಕ್ತಿ ತೋರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಶಾಲಾ - ಕಾಲೇಜುಗಳಿಗೆ ತೆರಳಿ ವಚನ ಸಾಹಿತ್ಯದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುತ್ತೇವೆ ಎಂದರು.

ಪ್ರಾಧ್ಯಾಪಕರಾದ ಶ್ರೀಮತಿ ಅನಿತಾ ಹೆಚ್.ದೊಡ್ಡಗೌಡರ್, ಪ್ರಸ್ತುತ ಸಮಾಜಕ್ಕೆ ವಚನ ಸಾಹಿತ್ಯದ ಅಗತ್ಯತೆ ಕುರಿತು ಮಾತನಾಡಿ, ಮನುಷ್ಯ ಪಕ್ಷಿಯಂತೆ ಹಾರುವುದನ್ನು, ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆದರೆ, ಮನುಷ್ಯ ಮಾನವನಾಗಿ ಬದುಕುವುದನ್ನು ಕಲಿಯಲಿಲ್ಲ ಎಂದರು.

ಇತ್ತೀಚಿನ ದಿನಗಳಲ್ಲಿ ಮನುಷ್ಯನ ನೈತಿಕ ಮೌಲ್ಯಗಳ ಅಧಃಪತನವಾಗುತ್ತಿದೆ. ಶರಣರು ರಚಿಸಿರುವ ವಚನ ಸಾಹಿತ್ಯದಿಂದ ಮಾತ್ರ ಮನುಷ್ಯ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಧಾರಣೆ ಮಾಡಿಕೊಳ್ಳಬಹುದು. ಜಗಜ್ಯೋತಿ ಬಸವಣ್ಣನವರು ರಚಿಸಿದ ವಚನಗಳ ಸಾರವನ್ನು ಅಳವಡಿಸಿಕೊಂಡರೆ, ಜೀವನ ಸಾರ್ಥಕವಾಗುತ್ತದೆ ಎಂದರು.

ವೇದಿಕೆಯಲ್ಲಿ ಜಗಜ್ಯೋತಿ ಬಸವಣ್ಣ, ಅಕ್ಕಮಹಾದೇವಿ, ಹಡಪದ ಅಪ್ಪಣ್ಣನ ವೇಷಧಾರಿಗಳು ವಚನಗಳನ್ನು ಹೇಳಿದ್ದು ಗಮನ ಸೆಳೆಯಿತು. 501 ಸುಮಂಗಲೆಯರಿಗೆ ಉಡಿ ತುಂಬಲಾಯಿತು.

ಕದಳಿ ವೇದಿಕೆ ಜಿಲ್ಲಾಧ್ಯಕ್ಷರಾದ ಕುಸುಮಾ ಲೋಕೇಶ್, ವೇದಿಕೆಯ ನೂತನ ಪದಾಧಿಕಾರಿಗಳಿಗೆ ಸೇವಾದೀಕ್ಷೆ ಬೋಧಿಸಿದರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಹಡಪದ ಅಪ್ಪಣ್ಣ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಶಾರದ ಕಣಗೊಟಗಿ 'ವೀರ ವಿರಾಗಿಣಿ ಅಕ್ಕಮಹಾದೇವಿ'ಯ ಆಧ್ಯಾತ್ಮಿಕ ಜೀವನ ಕುರಿತು ಉಪನ್ಯಾಸ ನೀಡಿದರು.

ಕದಳಿ ವೇದಿಕೆ ತಾಲ್ಲೂಕು ಅಧ್ಯಕ್ಷರಾದ ಕೆ.ಸಿ. ಶಾಂತಕುಮಾರಿ ಶಿವಯೋಗೀಶ್ ಪ್ರಾಸ್ತಾವಿಕ ಮಾತನಾಡಿದರು. ಅಮರಾವತಿ ಪರಮೇಶ್ವರಪ್ಪ ಗೌಡ್ರು, ಸುರೇಶ್ ಆರ್. ಕುಣೆಬೆಳಕೆರೆ, ಕದಳಿ ವೇದಿಕೆಯ ಗೌರವಾಧ್ಯಕ್ಷರಾದ ಶ್ರೀಮತಿ ಪಾನಿಪೂರಿ ರಂಗನಾಥ್, ಮಲೇಬೆನ್ನೂರು ಬಸವ ಬಳಗದ ಅಧ್ಯಕ್ಷ ವೈ.ನಾರೇಶಪ್ಪ, ಪುರಸಭೆ ಸದಸ್ಯ ಸಾಬಿರ್ ಅಲಿ, ಉಕ್ಕಡಗಾತ್ರಿ ಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಾರ್ಯದರ್ಶಿ ಸುರೇಶ್, ದತ್ತಿ ದಾನಿ ಎಂ.ಹನುಮಗೌಡ ಮತ್ತಿತರರು ಇದ್ದರು.

# ಹರಿಹರ ತಹಶೀಲ್ದಾರ್ ಕಚೇರಿಗೆ ಇಂದು ಡಿಸಿ ಭೇಟಿ

ಜಿಲ್ಲಾಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ತಾಲ್ಲೂಕು ಕಚೇರಿಗಳಿಗೆ ಭೇಟಿ ನೀಡುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಅವರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಹರಿಹರ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ಸಾರ್ವಜನಿಕ ಅಹವಾಲು ಸ್ವೀಕರಿಸಲಿದ್ದಾರೆ. ನಾಗರಿಕರು ಡಿಸಿ ಭೇಟಿಯ ಅವಕಾಶವನ್ನು ಪಡೆಯಬಹುದು ಎಂದು ಹರಿಹರ ತಾಲ್ಲೂಕು ತಹಶೀಲ್ದಾರ್ ತಿಳಿಸಿದ್ದಾರೆ.

# ನಿವೃತ್ತ ರಾಷ್ಟ್ರಪತಿಗೆ ಬಂಗಲೆ, 2.5 ಲಕ್ಷ ರೂ. ಪಿಂಚಣಿ

ನವದೆಹಲಿ, ಜು. 25 – ರಾಷ್ಟ್ರಪತಿ ಹುದ್ದೆಯಿಂದ ಕೆಳಗಿಳಿದಿರುವ ರಾಮನಾಥ ಕೋವಿಂದ್ ಅವರು ದೆಹಲಿಯ ಲ್ಯೂಟನ್ ಪ್ರದೇಶದಲ್ಲಿ ಜೀವನದ ಉಳಿದ ಅವಧಿಗೆ ಬಂಗಲೆ ಹಾಗೂ 2.5 ಲಕ್ಷ ರೂ.ಗಳ ಪಿಂಚಣಿ ಪಡೆಯಲಿದ್ದಾರೆ.

ಪ್ರತಿ ತಿಂಗಳು 1 ಲಕ್ಷ ರೂ.ಗಳವರೆಗೆ ವೆಚ್ಚ ಮಾಡ ಬಹುದಾದ ಕಚೇರಿ ಹಾಗೂ ಆಪ್ತ ಸಿಬ್ಬಂದಿಯನ್ನು ಹೊಂದಲಿದ್ದಾರೆ. ನಿವೃತ್ತ ರಾಷ್ಟ್ರಪತಿಗೆ ಉಚಿತ ವೈದ್ಯಕೀಯ ಸೇವೆ ಹಾಗೂ ದೇಶದಲ್ಲಿ ಎಲ್ಲಿ ಬೇಕಾದರೂ ಉನ್ನತ ದರ್ಜೆಯಲ್ಲಿ ಓರ್ವ ವ್ಯಕ್ತಿಯೊಂದಿಗೆ ಉಚಿತವಾಗಿ ಪ್ರಯಾಣಿಸುವ ಸೌಲಭ್ಯ ಹೊಂದಿರಲಿದ್ದಾರೆ.

# ರೈತರ ಉತ್ಪಾದನೆಗಳ ಮೌಲ್ಯವರ್ಧನೆಗಾಗಿ ಎಫ್‌ಪಿಗಳು ನೆರವು



**ಜಗಳೂರು ತಾಲ್ಲೂಕಿನ ಹಿರೇಅರಕೆರೆ ಗ್ರಾಮದಲ್ಲಿನ ರೈತ ತರಬೇತಿ ಕಾರ್ಯಕ್ರಮದಲ್ಲಿ ಜಿಲ್ಲಾ ಕೃಷಿ ಇಲಾಖೆ ಜಂಟಿ ಉಪ ನಿರ್ದೇಶಕ ಆರ್. ತಿಪ್ಪೇಸ್ವಾಮಿ**

ಜಗಳೂರು, ಜು.25- ಆರ್ಥಿಕ ಸಂಕಷ್ಟದಲ್ಲಿ ಸಿಲುಕಿರುವ ರೈತರ ಉತ್ಪಾದನೆಗಳ ಮೌಲ್ಯವರ್ಧನೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಫ್‌ಪಿಗಳಿಗೆ ಬೆಂಬಲಿಸುತ್ತಿವೆ ಎಂದು ಜಿಲ್ಲಾ ಜಂಟಿ ಕೃಷಿ ಉಪನಿರ್ದೇಶಕ ಆರ್.ತಿಪ್ಪೇಸ್ವಾಮಿ ತಿಳಿಸಿದರು.

ತಾಲ್ಲೂಕಿನ ಹಿರೇಅರಕೆರೆ ಗ್ರಾಮದಲ್ಲಿ ಸೋಮವಾರ ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿ, ಕೃಷಿ ಇಲಾಖೆ ಹಾಗೂ ಕೆವಿಕೆ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ಪ್ರಧಾನ ರೈತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಂದ ರೈತರಿಗಾಗಿ ಎಫ್‌ಪಿ ಹಾಗೂ ಕೆವಿಕೆಗಳ ಮೂಲಕ ಆಡಳಿತ ಸರ್ಕಾರಗಳು ಭವಿಷ್ಯದಲ್ಲಿ ಆರ್ಥಿಕ ಸಹಾಯ ಹಸ್ತ ಚಾಚಲಿವೆ. ಅಲ್ಲದೆ ಮಧ್ಯವರ್ತಿಗಳ ಕಾಟ ತಪ್ಪಿಸಿ, ರೈತರನ್ನು ಆರ್ಥಿಕವಾಗಿ ಸದೃಢರನ್ನಾಗಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆ ಮತ್ತು ಕೇಂದ್ರ ಸರ್ಕಾರದ ಸಂಪನ್ಮೂಲ ಸಂಸ್ಥೆಯಾದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳು ದಾವಣಗೆರೆ, ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಟ್ಟು 18 ಕಂಪನಿಗಳನ್ನು ಸ್ಥಾಪಿಸಿ, ರೈತರಿಗೆ ತಾಂತ್ರಿಕವಾಗಿ ಕೃಷಿ ಮಾಡುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ಬೆನ್ನೆಲುಬಾಗಿರುವುದು ಶ್ಲಾಘನೀಯ ಎಂದರು.

ತಾಲ್ಲೂಕು ಹಿರಿಯ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ ಮಾತನಾಡಿ, ಈಗಾಗಲೇ ತಾಲ್ಲೂಕಿನಲ್ಲಿ ತೋಟಗಾರಿಕಾ ಎಫ್‌ಪಿಓ ಕಾರ್ಯಾರಂಭ ಮಾಡಿದ್ದು, ಜಗಳೂರು ತಾಲ್ಲೂಕಿನಲ್ಲಿ ಇತ್ತೀಚಿನ ದಿನಗಳಲ್ಲಿ ಅಡಿಕೆ, ಬಾಳೆ, ಪಪ್ಪಾಯ, ದಾಳಿಂಬೆ, ನುಗ್ಗೆ ಸೇರಿದಂತೆ ವಿವಿಧ ತೋಟಗಾರಿಕೆ ಬೆಳೆಗಳಿಗೆ ಸರ್ಕಾರದಿಂದ ಬರುವ ಸಬ್ಸಿಡಿ ಮತ್ತು ಪೂರಕವಾದ ಉಪಕರಣ ಗಳನ್ನು ನೀಡಲಾಗುತ್ತಿದೆ. ಎಸ್‌ಸಿ, ಎಸ್‌ಟಿ ಜನಾಂಗದ ರೈತರಿಗೆ ಹನಿ ನೀರಾವರಿಗೆ ಶೇ.90 ರಷ್ಟು ಮತ್ತು ಸಾಮಾನ್ಯ ವರ್ಗಕ್ಕೆ ಶೇ.75 ಸಬ್ಸಿಡಿ ನೀಡಲಾಗುತ್ತಿದೆ. ತೋಟಗಾರಿಕೆ ಬೆಳೆಗಳಿಂದ ಸಮಗ್ರ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ ಎಂದರು.

ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಮಾತನಾಡಿ, ರೈತರು ಬೆಳೆದ ಬೆಳೆಗಳನ್ನು ಬ್ರ್ಯಾಂಡ್‌ಗಳನ್ನಾಗಿಸಿಕೊಂಡರೆ ಉತ್ಪಾದನಾ ವೆಚ್ಚದಲ್ಲಿ ಕಡಿತ, ಎಣ್ಣೆಕಾಳು ಹಾಗೂ ದ್ವಿದಳ ಧಾನ್ಯ ಬೆಳೆಗಳ ವಿಸ್ತರಣೆ ಹೆಚ್ಚಾಗಬೇಕು ಎಂದು ರೈತರಿಗೆ ಸಲಹೆ ನೀಡಿದರು.

ತೋಟಗಾರಿಕಾ ತಜ್ಞ ಎಂ.ಜಿ. ಬಸವನಗೌಡ ಮಾತನಾಡಿ, ತೋಟಗಾರಿಕೆ ಬೆಳೆ ಗಳನ್ನು ಬೆಳೆಯುವಾಗ ಅನುಸರಿಸುವ ವಿಧಾನ ಮತ್ತು ವೈಜ್ಞಾನಿಕ ಕೃಷಿ ಮಾಡುವ ವಿಧಾನಗಳ ಬಗ್ಗೆ ರೈತರಿಗೆ ಪೂರಕ ಮಾಹಿತಿ ನೀಡಿದರು.

ತಜ್ಞ ಸಣ್ಣಗೌಡರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಂಪನಿಯ ಅಧ್ಯಕ್ಷ ಮೆದಗಿನಕೆರೆ ಮಂಜುನಾಥ್, ನಿರ್ದೇಶಕರಾದ ಎಚ್.ಜಿ.ಉಮಾಪತಿ, ಸೋಮನಗೌಡ, ಅರಶಿಣಗುಂಡಿ ನಾಗರಾಜ್, ಕಲ್ಲೇದೇವರಪುರ ಕೃಷ್ಣಮೂರ್ತಿ, ಗುತ್ತಿದುರ್ಗ ಬಸವನಗೌಡ, ಕವಿತಾ ಸ್ವಾಮಿ, ಕೃಷಿ ವಿಜ್ಞಾನಿಗಳಾದ ಪವನ್ ಪಾಟೀಲ್, ಎಫ್‌ಪಿಓ ಸಿಇಓ ಮನೋಜ್ ಕುಮಾರ್‌ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಿ.ಬಿ.ಎಸ್.ಇ. : ವಿಜಯನಗರ ಜಿಲ್ಲೆಗೆ ಪರ್ಲ್ ಪಬ್ಲಿಕ್ ಶಾಲೆಗೆ ದ್ವಿತೀಯ ಸ್ಥಾನ



ಹರಪನಹಳ್ಳಿ, ಜು.25- ಮೊನ್ನೆ ಪ್ರಕಟವಾದ ಸಿಬಿಎಸ್ಇ ಹತ್ತನೇ ತರಗತಿ ಫಲಿತಾಂಶದಲ್ಲಿ ಪಟ್ಟಣದ ಹೊರವಲಯ ದಲ್ಲಿರುವ ಪರ್ಲ್ ಪಬ್ಲಿಕ್ ಶಾಲೆಯು ದೇಶಕ್ಕೆ 11ನೇ ರ್‍ಯಾಂಕ್, ರಾಜ್ಯಕ್ಕೆ 8ನೇ ರ್‍ಯಾಂಕ್ ಹಾಗೂ ವಿಜಯನಗರ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಪರ್ಲ್ ಪಬ್ಲಿಕ್ ಶಾಲೆಗೆ ಶೇ. 100ರಷ್ಟು ಫಲಿತಾಂಶ ಲಭಿಸಿದ್ದು, ವಿದ್ಯಾರ್ಥಿ ಅಮಿತಾಶ್ ರಾವ್ ಆರ್. ಶೇ. 98 (490) ಅಂಕ ಪಡೆದು ದೇಶಕ್ಕೆ 11ನೇ ರ್‍ಯಾಂಕ್, ರಾಜ್ಯಕ್ಕೆ 8ನೇ ರ್‍ಯಾಂಕ್ ಹಾಗೂ ವಿಜಯನಗರ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.

ವಿದ್ಯಾರ್ಥಿನಿ ವಿ.ಜಿ. ನಿಖಿತ ಶೇ. 97 (486) ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಇ.ಎನ್.ಮಹಮ್ಮದ್ ಮುಸಾದ್ಧಿಕ್ 473 ಅಂಕ, ಎಸ್.ಎಸ್. ತೇಜಸ್ವಿನಿ 472 ಅಂಕ, ಡಿ. ಮಹಮ್ಮದ್ ಸಫಾನ್ 469 ಅಂಕ, ಟಿ.ಎ. ಮೋಕ್ಷ ಪ್ರಿಯ 466 ಅಂಕ ಪಡೆದುಕೊಂಡು ಶಾಲೆಗೆ 3,4,5,6ನೇ ಸ್ಥಾನ ಪಡೆದುಕೊಂಡಿದ್ದಾರೆ. ಉಳಿದಂತೆ 9 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ.

# ನಗರದಲ್ಲಿ ನಾಳೆ ಸಹಜ ಯೋಗ

ದಾವಣಗೆರೆ, ಜು. 25- ನಗರದ ಸಹಜ ಯೋಗ ಕೇಂದ್ರದಿಂದ ನಾಡಿದ್ದು ದಿನಾಂಕ 27 ರಂದು ಸಂಜೆ 7 ಗಂಟೆಗೆ ರೋಟರಿ ಬಾಲಭವನದಲ್ಲಿ ಸಹಜ ಯೋಗ ಕಾರ್ಯಕ್ರಮ ನಡೆಯಲಿದೆ. ಸಹಜ ಯೋಗದಿಂದ ವ್ಯಕ್ತಿಯ ಮಾನಸಿಕ, ಏಕಾಗ್ರತೆ ಶಕ್ತಿ ಹೆಚ್ಚಿ ಶಾಂತಿ ಮತ್ತು ಸದೃಢ ಆರೋಗ್ಯ ಪಡೆಯಬಹುದು ಎಂದು ರಾಜೇಶ್ವರಿ (9113647362), ಸೌಮ್ಯ (6362752142) ತಿಳಿಸಿದ್ದಾರೆ.


॥ ಶ್ರೀ ಆಂಜನೇಯ ಪ್ರಸನ್ನ ॥ ॥ ಶ್ರೀ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾಲ್ಲೂಕು, ಶಿರಮಗೊಂಡನಹಳ್ಳಿ ಗ್ರಾಮದ ದಾವಣಗೆರೆ ಸಿಟಿ ವಾಸಿ
ದಿ॥ ಶ್ರೀ ಕರಿಯಪ್ಪರ ಮಹಾದೇವಪ್ಪನವರ ಧರ್ಮಪತ್ನಿ ಶ್ರೀಮತಿ ಮಂಜುಳಮ್ಮ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 22.07.2022ನೇ ಶುಕ್ರವಾರ ಬೆಳಗಿನ ಜಾವ 5.00 ಗಂಟೆಗೆ ನಮ್ಮ ಮಗ
ದಿ॥ ಶ್ರೀ ಕೆ.ಎಂ. ಹನುಮಂತರಾಜು ಇವರ ಧರ್ಮಪತ್ನಿ
**ಶ್ರೀಮತಿ ಕೆ.ಹೆಚ್. ಗೀತಾ**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ "ಯನ್ನು
ದಿನಾಂಕ : 26.07.2022ನೇ ಮಂಗಳವಾರ ಬೆಳಗ್ಗೆ 10.30ಕ್ಕೆ
ಶ್ರೀ ಆಂಜನೇಯ ಸಮುದಾಯ ಭವನ, ಶಾಮನೂರು, ದಾವಣಗೆರೆ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ ಕುಟುಂಬ ವರ್ಗ :
ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.
ಬಿಂದಪ್ಪ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು
ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ: 24.07.2022 ರಂದು ನಿಧನರಾದ ಜರಿಕಟ್ಟೆ ಗ್ರಾಮ ವಾಸಿಯಾದ ಕೆಂಚಪ್ಪ ಮತ್ತು ನಿರ್ಮಲ ಅವರ ಮಗಳು
**ಕು. ನಕ್ಷಾ ಕೆ ಕೆ**
ವಿದ್ಯಾರ್ಥಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ
ಆಡಳಿತ ಮಂಡಳಿ ಮತ್ತು ಬೋಧಕ – ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
**ಚೇತನ ಒಲಂಪಿಯಾಡ್ ಸ್ಕೂಲ್**
18ನೇ ಅಡ್ಡರಸ್ತೆ, ಅಂಜನೇಯ ಬಡಾವಣೆ ಬೈಪಾಸ್ ಹತ್ತಿರ, ಹದಡಿರಸ್ತೆ, ದಾವಣಗೆರೆ

**ಏಳನೇ ವರ್ಷದ ಪುಣ್ಯಸ್ಮರಣೆ**



**ಪವಾಡಪ್ಪ ದಿ॥ ಪಿ.ಎಸ್. ಜಯದೇವಪ್ಪ**
ನೀವು ನಮ್ಮನ್ನಗಲಿ ಇಂದಿಗೆ (26.7.2022) ಏಳು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವ.
ಪತ್ನಿ, ಶ್ರೀಮತಿ ನಾಗರತ್ನಮ್ಮ
ಮಗ, ಸೊಸೆ : ಶ್ರೀಮತಿ ಶಿಲ್ಪಾ, ಪಿ. ಜೆ. ಗುರುರಾಜ್
ಮಗ, ಸೊಸೆ : ಶ್ರೀಮತಿ ಆಶಾ, ಪಿ. ಜೆ. ತಿಪ್ಪೇಸ್ವಾಮಿ
ಮಗಳು, ಅಳಿಯ : ಶ್ರೀಮತಿ ಕಾವೇರಿ ಎನ್. ವಸಂತಕುಮಾರ್
ಮೊಮ್ಮಕ್ಕಳು : ಯಶ್ ಪವಾಡಪ್ಪ, ಹರ್ಷಿಕ, ತನ್ವಿ
ಮತ್ತು ಕುಟುಂಬ ವರ್ಗದವರು.
# 900/ B61, ಶಕ್ತಿ ನಗರ, 1ನೇ ಮೇನ್, 2ನೇ ಕ್ರಾಸ್ ನಿಟುವಳ್ಳಿ, ದಾವಣಗೆರೆ.


**ಟಿ.ಹೆಚ್ ಮುದ್ದಪ್ಪ ನಿಧನ**



ದಾವಣಗೆರೆ ವಿನೋಬನಗರ 1ನೇ ಮೇನ್, 3ನೇ ಕ್ರಾಸ್ ವಾಸಿ ಅಕ್ಕಿ ವ್ಯಾಪಾರಸ್ಥರಾದ ಟಿ.ಹೆಚ್. ಮುದ್ದಪ್ಪ (75) ಇವರು ದಿನಾಂಕ 25.7.2022ರ ಸೋಮವಾರ ಬೆಳಿಗ್ಗೆ 8.30ಕ್ಕೆ ನಿಧನರಾದರು. ಪತ್ನಿ, ಮಕ್ಕಳು, ಮೊಮ್ಮಕ್ಕಳು ತಂಗಿಯರು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.7.2022 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

# ರಾಜ್ಯಸಭಾ ಸ್ಥಾನದ ಆಮಿಷ: ಬಂಧನ

(1ನೇ ಪುಟದಿಂದ) ಭಾರೀ ಪ್ರಮಾಣದ ಲಂಚ ಪಡೆದು ಮಾಡಿಕೊಡುವುದಾಗಿ ಬೂರ, ಅರೋರ, ಖಾನ್ ಹಾಗೂ ನಾಯಕ್‌ಗೆ ಹೇಳಿ ವಂಚನೆಯ ಜಾಲ ಹರಡಿದ್ದ. ರಾಜ್ಯಸಭಾ ಸೀಟು, ರಾಜ್ಯಪಾಲರ ಹುದ್ದೆ, ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳೂ ಸೇರಿದಂತೆ ಹಲವು ಆಮಿಷಗಳನ್ನು ಇವರು ಒಡ್ಡುತ್ತಿದ್ದರು. ರಾಜ್ಯಸಭಾ ಸ್ಥಾನದ ಅಭ್ಯರ್ಥಿ ಮಾಡುವುದಾಗಿ ಹೇಳಿ 100 ಕೋಟಿ ರೂ. ವಂಚಿಸುವ ಪ್ರಯತ್ನ ನಡೆಸಿದ್ದಾಗ ಇವರು ಸಿಕ್ಕಿಬಿದ್ದಿದ್ದಾರೆ.

# ಮೊಬೈಲ್ ತಲೆ ತಗ್ಗಿಸಿದರೆ, ಪುಸ್ತಕ ತಲೆ ಎತ್ತುವಂತೆ ಮಾಡುತ್ತದೆ

## ಅಭಿನಂದನಾ ಸಮಾರಂಭದಲ್ಲಿ ಮಂಜಮ್ಮ ಜೋಗತಿ



ದಾವಣಗೆರೆ, ಜು. 25- ಒಂದು ಮೊಬೈಲ್ ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡಿದರೆ, ಒಂದೊಳ್ಳೆ ಪುಸ್ತಕ ನಿಮ್ಮನ್ನು ತಲೆ ಎತ್ತಿ ಬದುಕುವಂತೆ ಮಾಡುತ್ತದೆ. ಪಾಲಕರು ಮಕ್ಕಳಿಗೆ ಮೊಬೈಲ್ ಕೊಡಿಸುವ ಬದಲು ಶರಣರ, ಸಂತರ, ಮಹನೀಯರ ಪುಸ್ತಕಗಳನ್ನು ಓದಲು ಕೊಡಿ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾತಾಶ್ರೀ ಬಿ. ಮಂಜಮ್ಮ ಜೋಗತಿ ಕರೆ ನೀಡಿದರು.

ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಬೆಳಕು ಜಾನಪದ ಕಲಾ ತಂಡ ಎಸ್.ಸಿ. ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮಕ್ಕಳು ತಂದೆ-ತಾಯಿಗಳಿಗೆ ಗೌರವ ಕೊಡುವುದನ್ನು ಮೊದಲು ಕಲಿಯಬೇಕು. ಓದಿನಲ್ಲಿ ಶ್ರದ್ಧಾ-ಭಕ್ತಿ ಇರಲಿ. ವಿದ್ಯೆ ಕಲಿಸಿದ ಗುರುಗಳನ್ನು ಯಾವತ್ತು ಮರೆಯದಂತೆ ಅವರಿಗೆ ಗೌರವ ನೀಡಿದರೆ ಜೀವನದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಹಿತ ನುಡಿದರು.

ಗುಡಿ ಗುಂಡಾರಗಳಲ್ಲಿ ದೇವರನ್ನು ಹುಡುಕುವ ಬದಲು ತಮ್ಮ ತಮ್ಮ ಮನೆಯಲ್ಲಿನ ತಂದೆ-ತಾಯಿಗಳನ್ನು ದೇವರೆಂದು ಪೂಜಿಸಿದರೆ ನಿಮ್ಮ ಬಾಳು ಬಂಗಾರವಾಗುತ್ತದೆ ಎಂದು ಹೇಳಿದರು.

ಮನುಷ್ಯನಿಗೆ ಸಮಯ ಪ್ರಜ್ಞೆ ಬಹಳ ಮುಖ್ಯ. ಸಮಯಕ್ಕೆ ಬೆಲೆ ಕೊಡದಿದ್ದರೆ ಜೀವನ ನಿರರ್ಥಕ. ಸಮಯಕ್ಕೆ ಮಹತ್ವ ನೀಡಿದ್ದೇ ಆದಲ್ಲಿ ಜೀವನದಲ್ಲಿ ಎತ್ತರಕ್ಕೆ ಬೆಳೆಯಲು ಸಾಧ್ಯವಿದೆ ಎಂದರು.

ಕಲೆಯನ್ನೇ ವೃತ್ತಿ ಮಾಡಿಕೊಳ್ಳುವ ಬದಲು ಹವ್ಯಾಸಿ ಕಲಾವಿದರಾಗುವ ಜೊತೆಗೆ ತಮ್ಮದೇ ಆದ ಬದುಕು ಕಟ್ಟಿಕೊಳ್ಳಿ. ಎಂಥದೇ ಸಮಸ್ಯೆ, ಸವಾಲುಗಳು ಬಂದರೂ ಧೃತಿಗೆಡದೇ ಸಮರ್ಥವಾಗಿ ಎದುರಿಸುವ ಮನೋಭಾವನೆ ಬೆಳೆಸಿಕೊಳ್ಳಿ, ಯಾರೂ ಕೂಡ ಆತ್ಮಹತ್ಯೆಗೆ ಶರಣಾಗದಿರಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ದಾವಣಗೆರೆಯಲ್ಲಿ ಕಳೆದ ಬಾಲ್ಯವನ್ನು ನೆನೆದು ಕಣ್ಣೀರಿಟ್ಟ ಮಂಜಮ್ಮ ಜೋಗತಿ ಅವರು, ಜಾನಪದ ಕಲೆ ನನ್ನನ್ನು ಕೈಹಿಡಿಯಿತು. ಜೀವನದಲ್ಲಿ ಕಷ್ಟಗಳು, ಯಾತನೆ, ನಿಂದನೆಗಳು, ಅವಮಾನ, ದೌರ್ಜನ್ಯಗಳನ್ನು ಮೆಟ್ಟಿನಿಂತಿದ್ದರಿಂದ ಇಂದು ಸನ್ಮಾನಗಳು ಆಗುತ್ತಿವೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನನ್ನ ಆತ್ಮಕಥನ ಪಠ್ಯವಾಗಿದೆ ಎಂದರು.

ಗೋಟಗೋಡಿ ಕರ್ನಾಟಕ ಜಾನಪದ ವಿವಿ ಅತಿಥಿ ಸಹಾಯಕ ಪ್ರಾಧ್ಯಾಪಕ ಡಾ. ಅರುಣ್ ಜೋಳದ ಕೂಡ್ಲಿಗಿ ಮಂಜಮ್ಮ ಜೋಗತಿಯ ಬದುಕು-ಬರಹ, ಜೀವನದಲ್ಲಿ ಅನುಭವಿಸಿದ ನೋವಿನ ಕ್ಷಣಗಳನ್ನು ಸಭಿಕರೆದುರು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಡಿವೈಎಸ್ಪಿ ಬಿ.ಎಸ್. ಬಸವರಾಜ್ ಮಾತನಾಡಿ, ನಿರಂತರ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿದೆ ಎನ್ನುವುದಕ್ಕೆ ಮಂಜಮ್ಮ ಜೋಗತಿಯೇ ಸಾಕ್ಷಿ ಎಂದರು.

ಇದೇ ವೇಳೆ ಸಿದ್ಧಗಂಗಾ ವಿದ್ಯಾಸಂಸ್ಥೆ ವತಿಯಿಂದ ಮಂಜಮ್ಮ ಜೋಗತಿಯವರನ್ನು ಗೌರವಿಸಲಾಯಿತು. ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥೆ ಜಸ್ಟಿನ್ ಡಿಸೋಜ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ, ಯುನಿಟಿ ಹೆಲ್ತ್‌ಸೆಂಟರ್ ಮುಖ್ಯಸ್ಥ ಡಾ. ಬಿ. ಎಸ್. ನಾಗಪ್ರಕಾಶ್, ಹಿರಿಯ ವಕೀಲರಾದ ರಾಘವೇಂದ್ರನಾಯ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಸಿದ್ಧಗಂಗಾ ಪಿಯು ಕಾಲೇಜಿನ ನಿರ್ದೇಶಕ ಡಾ. ಡಿ. ಎಸ್. ಜಯಂತ್, ನಂಜಾನಾಯ್ಕ, ಚಂದ್ರಾನಾಯ್ಕ, ಕೆ.ಎನ್. ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಸಿದ್ಧಗಂಗಾ ವಿದ್ಯಾಸಂಸ್ಥೆ ಮಕ್ಕಳು ಪ್ರಾರ್ಥಿಸಿದರು. ಪುಟ್ಟಾನಾಯ್ಕ ಸ್ವಾಗತಿಸಿದರು. ಎಸ್. ಸಂತೋಷ್ ನಿರೂಪಿಸಿದರು. ಟಿ. ಪ್ರವೀಣ್ ಕುಮಾರ್ ವಂದಿಸಿದರು.

# ಮತ್ತೆ ಅಧಿಕಾರ ಹಿಡಿಯಲು ಶ್ರಮ ಅಗತ್ಯ

**(1ನೇ ಪುಟದಿಂದ)** ಇವುಗಳಿಗೆ ತಕ್ಷಣ ಕೇಂದ್ರ ಅನುಮತಿ ನೀಡಿದರೆ, ರಾಜ್ಯದ ಬಹುಜನರ ಬೇಡಿಕೆಗಳನ್ನು ಈಡೇರಿಸಿದಂತಾಗುತ್ತದೆ.

ಇವು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ನಾವು ಕಾನೂನಾತ್ಮಕವಾಗಿ ಒಂದೆಡೆ ಹೋರಾಟ ನಡೆಸಿ, ಕೆಲವುಗಳಲ್ಲಿ ಜಯ ಸಾಧಿಸಿದ್ದೇವೆ. ಮತ್ತೆ ಕೆಲವು ವಿಷಯಗಳಲ್ಲಿ ಕೇಂದ್ರದ ಅನುಮತಿ ಬೇಕಾಗಿದೆ ಎಂದಿದ್ದಾರೆ.

ಚುನಾವಣಾ ಸಂದರ್ಭದಲ್ಲಿ ನೀವು ನಮಗೆ ಎಷ್ಟು ಸಮಯ ಕೊಡುತ್ತೀರೋ ಅಷ್ಟು ನಮ್ಮದಲ್ಲದ ಮತಗಳನ್ನು ಪಡೆಯಲು ಸಾಧ್ಯ ಎಂದು ಬೊಮ್ಮಾಯಿ ವಿವರಿಸಿದ್ದಾರೆ ಎನ್ನಲಾಗಿದೆ.

ಗುಜರಾತ್ ವಿಧಾನಸಭೆ ಚುನಾವಣೆಯತ್ತ ನಾನು ಮತ್ತು ಗೃಹ ಸಚಿವ ಅಮಿತ್ ಷಾ ಹೆಚ್ಚಿನ ಸಮಯ ನೀಡುತ್ತೇವೆ. ನಿಮ್ಮಲ್ಲಿನ 30 ಜಿಲ್ಲೆಗಳಲ್ಲೂ ಕಾರ್ಯಕ್ರಮಗಳನ್ನು ರೂಪಿಸಿ, ನಾನು ಸರ್ಕಾರಿ ಕಾರ್ಯಕ್ರಮ ಹಾಗೂ ಪಕ್ಷದ ಬೃಹತ್ ಸಮಾವೇಶಗಳಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದಾರೆ.

ಅಮಿತ್ ಷಾ ಅವರು ಕರ್ನಾಟಕದಲ್ಲಿ ಎರಡು, ಮೂರು ವಾರಗಳ ಕಾಲ ಬಿಡಾರ ಹೂಡಿ, ನಿಮ್ಮಲ್ಲಿನ ಪರಿಸ್ಥಿತಿ ಅವಲೋಕಿಸಿ, ಅಭ್ಯರ್ಥಿಗಳ ಆಯ್ಕೆ ಸೇರಿದಂತೆ, ಎಲ್ಲಾ ರಾಜಕೀಯ ವಿಚಾರಗಳನ್ನು ಕೈಗೊಳ್ಳುತ್ತಾರೆ.

ಈಗಾಗಲೇ ಬಂದಿರುವ ಸಮೀಕ್ಷೆಗಳನ್ನು ಆಧಾರವಾಗಿಟ್ಟುಕೊಂಡು ನೀವು ಚುನಾವಣಾ ಕೆಲಸ ಆರಂಭಿಸಿ ಎಂದು ಪ್ರಧಾನಿಯವರು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಮುಂದಿನ ಚುನಾವಣೆಯಲ್ಲಿ ನಾವು ಇಪ್ಪತ್ತೈದರಿಂದ ಮೂವತ್ತು ಸೀಟುಗಳನ್ನು ಹೆಚ್ಚುವರಿಯಾಗಿ ಗೆಲ್ಲಿಸಿಕೊಡುತ್ತೇವೆ. ಆದರೆ ನೀವು ಕನಿಷ್ಟ ತೊಂಭತ್ತು ಕ್ಷೇತ್ರಗಳಲ್ಲಿ ಗೆಲುವು ಗಳಿಸಲು ಸನ್ನದ್ಧರಾಗಿರಬೇಕು ಎಂದು ಬಿಜೆಪಿ ವರಿಷ್ಠರು ರಾಜ್ಯ ನಾಯಕರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ವರಿಷ್ಠರ ಸೂಚನೆ ದಕ್ಕಿರುವ ಹಿನ್ನೆಲೆಯಲ್ಲಿ ಪಕ್ಷದ ವರ್ಚಸ್ಸನ್ನು ಹೆಚ್ಚಿಸಲು ಈ ತಿಂಗಳ 28 ರಿಂದ ರಾಜ್ಯಾದ್ಯಂತ ಸಾಧನಾ ಸಮಾವೇಶಗಳನ್ನು ನಡೆಸಲು ರಾಜ್ಯ ಬಿಜೆಪಿ ನಿರ್ಧರಿಸಿದೆ.

28 ರಂದು ದೊಡ್ಡ ಬಳ್ಳಾಪುರದಲ್ಲಿ ಮೊದಲ ಸಾಧನಾ ಸಮಾವೇಶ ನಡೆಯಲಿದ್ದು, ತದನಂತರ ರಾಜ್ಯದ ಎಲ್ಲ ಜಿಲ್ಲೆಗಳ ಸಾಧನಾ ಸಮಾವೇಶ ನಡೆಸಲು ರಾಜ್ಯದ ನಾಯಕರು ನಿರ್ಧರಿಸಿದ್ದಾರೆ.

ಸಮಾವೇಶಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಕಡ್ಡಾಯವಾಗಿ ಭಾಗವಹಿಸಲಿದ್ದಾರೆ.

ಸಮಾವೇಶದ ಸಂದರ್ಭದಲ್ಲಿ ವಿವಿಧ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಬಿಜೆಪಿಗೆ ಸೆಳೆಯುವ ಕೆಲಸ ನಡೆಯುತ್ತಿದ್ದು, ಅದರೊಂದಿಗೆ ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮಗಳು ನಡೆಯಲಿವೆ.

# ಜಗಳೂರಿನ ಸುಲ್ತಾನ್ ನಿಧನ



**(1ನೇ ಪುಟದಿಂದ)** ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಜಾತಮ್ಮ ರಾಜು, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎನ್.ಟಿ. ಎರ್ರಿಸ್ವಾಮಿ ಹಾಗೂ ಕದಳಿ ಮಹಿಳಾ ವೇದಿಕೆಯ ಸದಸ್ಯರಾದ ಚಂಪಾವತಿ ಅವರುಗಳು ಮೃತರ ಸ್ವಗೃಹಕ್ಕೆ ಭೇಟಿ ನೀಡಿ, ಅಂತಿಮ ನಮನ ಸಲ್ಲಿಸಿದರು. ಅವರ ಸೇವೆಯನ್ನು ಸ್ಮರಿಸಿ ಸಂತಾಪ ಸೂಚಿಸಿದರು.

**ತಾಲ್ಲೂಕು ಆಡಳಿತದಿಂದ ಶ್ರದ್ಧಾಂಜಲಿ** ; ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಸುಲ್ತಾನ್ ಬಿ ಅವರಿಗೆ ತಾಲ್ಲೂಕು ಆಡಳಿತದ ಪರವಾಗಿ ತಹಶೀಲ್ದಾರ್ ಸಂತೋಷಕುಮಾರ್ ಶ್ರದ್ಧಾಂಜಲಿ ಸಲ್ಲಿಸಿದರು.

# ಹರಪನಹಳ್ಳಿ : ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ

ಹರಪನಹಳ್ಳಿ, ಜು. 25 - ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯ(ಆರ್‌ಎಂಎಸ್‌ಎ)ದಲ್ಲಿ 7, 8 ಮತ್ತು 9ನೇ ತರಗತಿಗಳಿಗೆ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷೆಯು ನಾಡಿದ್ದು ದಿನಾಂಕ 27ರ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಆಯ್ದ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ವಿವರಗಳಿಗೆ ಶಾಲೆಯ ಮುಖ್ಯೋಪಾಧ್ಯಾಯ ಹೆಚ್.ಕೆ.ಚಂದ್ರಪ್ಪ ಅವರನ್ನು ಸಂಪರ್ಕಿಸಬಹುದಾಗಿದೆ.

# ಸ್ವದೇಶಕ್ಕೆ ನಿಮ್ಮ ಜ್ಞಾನ ಕೌಶಲ್ಯದ ಕೊಡುಗೆ ನೀಡಿ

## ಗಾಣಿಗ ಸಮಾಜದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರದಲ್ಲಿ ಡಾ. ಬಸವರಾಜಪ್ಪ ಕಿವಿಮಾತು



ದಾವಣಗೆರೆ, ಜು.25- ಜ್ಞಾನಾರ್ಜನೆ ಪಡೆದು ವಿದೇಶಕ್ಕೆ ಹೋಗಿ ಅಲ್ಲಿ ಜ್ಞಾನ ಕೌಶಲ್ಯ ಧಾರೆ ಎರೆಯುವ ಬದಲಿಗೆ ಭಾರತದಲ್ಲೇ ಉದ್ಯೋಗಾವಕಾಶ ಗಳಿದ್ದು, ಅದನ್ನು ಸದ್ಬಳಸಿಕೊಂಡು ಸ್ವದೇಶಕ್ಕೆ ಕೊಡುಗೆ ನೀಡುವಂತೆ ಡಾ. ಜಿ.ಸಿ. ಬಸವರಾಜಪ್ಪ ವಿದ್ಯಾರ್ಥಿ ಸಮೂಹಕ್ಕೆ ಸಲಹೆ ನೀಡಿದರು.

ನಗರದ ರೋಟರಿ ಬಾಲಭವನದಲ್ಲಿ ಗಾಣಿಗರ ಸಮಾಜದ ಮಹಿಳಾ ಘಟಕದ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಕಳೆದ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇ. 85 ಕ್ಕೂ ಮೇಲ್ಪಟ್ಟು ಅಂಕ ಪಡೆದ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ವಿದ್ಯಾರ್ಜನೆ ಪಡೆದ ನಂತರ ಅಮೇರಿಕಾ, ಇಂಗ್ಲೆಂಡ್ ಹೀಗೆ ವಿದೇಶಕ್ಕೆ ಉದ್ಯೋಗಾವಕಾಶವನ್ನರಸಿ ಹೋಗಬೇಕಾಗಿಲ್ಲ. ಅಲ್ಲಿಗೆ ಹೋದರೂ ಕೆಲಸ ಕಲಿತು ಮರಳಿ ಸ್ವದೇಶಕ್ಕೆ ಬಂದರೆ ಇಲ್ಲೇ ಸಾಕಷ್ಟು ಉದ್ಯೋಗಾವಕಾಶಗಳಿವೆ. ಆ ಮೂಲಕ ನಿಮ್ಮ ಜ್ಞಾನ ಕೌಶಲ್ಯಗಳ ಮುಖೇನ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಕಿವಿಮಾತು ಹೇಳಿದರು.

ಹಣ, ಆಸ್ತಿಗಿಂತ ವಿದ್ಯೆಗೆ ಹೆಚ್ಚಿನ ಗೌರವವಿದೆ. ಎಷ್ಟೇ ಕೋಟ್ಯಾಧಿಪತಿಯಾದರೂ ಸಹ ಹಣಕ್ಕಷ್ಟೇ ಮಹತ್ವವಿರುತ್ತದೆಯೇ ಹೊರತು ವ್ಯಕ್ತಿ ಮತ್ತು ವ್ಯಕ್ತಿತ್ವಕ್ಕೆ ಇರುವುದಿಲ್ಲ. ಅದೇ ಶಿಕ್ಷಣದಿಂದ ಜ್ಞಾನಾರ್ಜನೆ ಪಡೆದ ವರಿಗೆ ಸಮಾಜದಲ್ಲಿ ಮಹತ್ವದ ಗೌರವ ಇದೆ. ಜ್ಞಾನದ ಮುಂದೆ ಹಣವು ಸರಿಸಮನಲ್ಲ ಎಂದು ತಿಳಿಸಿದರು.

ವಿದ್ಯೆ ಇದ್ದರೆ ಸಿರಿ, ಸಂಪತ್ತು ತಾನಾಗಿಯೇ ಒಲಿದು ಬರಲಿದೆ. ಹಾಗಾಗಿ ಮಕ್ಕಳನ್ನು ಹೆಚ್ಚಾಗಿ ಜ್ಞಾನಾರ್ಜನೆ ಮತ್ತು ಪ್ರತಿಭೆ ಅನಾವರಣಕ್ಕೆ ಹೆಚ್ಚು ಆಸಕ್ತಿ ತೋರಿಸುವ ದಾರಿ ತೋರಿಸಬೇಕು. ಹಣವನ್ನು ಬೆನ್ನತ್ತುವಂತಹವರ ನ್ನಾಗಿಸಬಾರದು ಎಂದು ಪೋಷಕರಿಗೆ ಹೇಳಿದರು.

ಕಠಿಣ ಪರಿಶ್ರಮ, ಆಸಕ್ತಿ ಇದ್ದರೆ ಶೈಕ್ಷಣಿಕ ಪ್ರಗತಿ ಸಾಧಿಸಬಹುದು. ದಿನಕ್ಕೆ ಕನಿಷ್ಟ 6 ರಿಂದ 8 ತಾಸು ವಿದ್ಯಾರ್ಜನೆ ಮಾಡಿದರೆ, ಹೆಚ್ಚಿನ ಅಂಕ ಪಡೆದು ಮೆರಿಟ್‌ನಲ್ಲಿ ಸಾಧನೆ ಮಾಡಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಜಿಲ್ಲಾ ಗಾಣಿಗರ ಸಮಾಜದ ಅಧ್ಯಕ್ಷ ಕೆ.ಎಸ್. ಮಲ್ಲೇಶಪ್ಪ ಮಾತನಾಡಿ, ಹಿಂದೆ ಶಿಕ್ಷಣವು ಕೇವಲ ಶ್ರೀಮಂತರ ಮಕ್ಕಳಿಗಷ್ಟೇ ಸೀಮಿತವಾಗಿತ್ತು. ಆದರೀಗ ಎಲ್ಲಾ ವರ್ಗದ ಮಕ್ಕಳೂ ಶಿಕ್ಷಣ ಪಡೆದು, ಭವಿಷ್ಯ ಕಟ್ಟಿಕೊಳ್ಳಲು ಸರ್ಕಾರಿ ಸೌಲಭ್ಯಗಳಿವೆ. ಅವುಗಳನ್ನು ಸದ್ವಿನಿಯೋಗಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕೆಂದರು.

ಗಾಣಿಗರ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಉಮಾ ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು.

# ಸುಗಮಕ್ಕೆ ಆನ್‌ಲೈನ್ ಕ್ರಮ

**(1ನೇ ಪುಟದಿಂದ)** ಅಧ್ಯಕ್ಷತೆ ವಹಿಸಿದ್ದ ರುಪ್ಸ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ ಮಾತನಾಡಿ, ಅಗ್ನಿ ಶಾಮಕ ಇಲಾಖೆಯಿಂದ ಅನುಮತಿ ಪಡೆಯುವ ಪ್ರಕ್ರಿಯೆ ಸರಳಗೊಳಿಸಲಾಗಿದೆ. ಶಾಲೆಗಳ ನೋಂದಣಿ ಹಾಗೂ ನವೀಕರಣಕ್ಕೆ ಆನ್‌ಲೈನ್ ಮೂಲಕ ವ್ಯವಸ್ಥೆ ಕಲ್ಪಿಸಿರುವ ಸೌಲಭ್ಯಗಳನ್ನು ಜಾರಿಗೆ ತಂದ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ ಮಾತನಾಡಿ, ಖಾಸಗಿ ಶಾಲೆಗಳಿಗೆ ತೊಂದರೆ ನೀಡುವ ಉದ್ದೇಶ ಇಲಾಖೆಯದ್ದಲ್ಲ. ಮಾನವೀಯತೆ ನೆಲೆಯಲ್ಲಿ ಕಾಲಮಿತಿಯಲ್ಲಿ ಸರ್ಕಾರದ ನಿರ್ದೇಶನಗಳನ್ನು ಜಾರಿಗೆ ತರಲಾಗುತ್ತಿದೆ. ಒಂದೆರಡು ಶಾಲೆಗಳ ತಪ್ಪಿನಿಂದ ಆಗುವ ಪರಿಣಾಮಕ್ಕಾಗಿ, ಇಡೀ ವ್ಯವಸ್ಥೆಯನ್ನು ದೂರಬಾರದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಸಹ ಕಾರ್ಯದರ್ಶಿ ಕೆ.ಎಸ್. ಮಂಜುನಾಥ ಅಗಡಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಶೈಕ್ಷಣಿಕ ವೆಚ್ಚವನ್ನು ಶೇ.57ರಷ್ಟು ಕಡಿಮೆ ಮಾಡಿವೆ. ಇಷ್ಟಾದರೂ, ಶಾಲೆಗಳ ಅನುಮತಿಗಾಗಿ ವಿವಿಧ ಇಲಾಖೆಗಳಿಗೆ ಅಲೆದಾಡುವಂತೆ ಮಾಡುವುದು ಗುಬ್ಬಿ ಮೇಲೆ ಬ್ರಹ್ಮಾಸ್ತ್ರದಂತೆ. ಶಾಲೆ ಕುರಿತ ಮಾಹಿತಿ, ವಿದ್ಯಾರ್ಥಿಗಳ ಟಿ.ಸಿ., ಎಸ್.ಎ.ಟಿ.ಎಸ್. ಸೇರಿದಂತೆ ಹಲವಾರು ವಿಷಯಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿದರು.

ವೇದಿಕೆಯ ಮೇಲೆ ರುಪ್ಸ ಗೌರವಾಧ್ಯಕ್ಷ ಚಂದ್ರಕಾಂತ್ ಭಂಡಾರೆ, ಡಿಎಎಂಎಸ್ ಅಧ್ಯಕ್ಷ ಟಿ.ಎಂ. ಉಮಾಪತಯ್ಯ, ಡಿಎಎಂಎಸ್ ಪ್ರಧಾನ ಕಾರ್ಯದರ್ಶಿ ಸಿ. ರಾಮಮೂರ್ತಿ, ರುಪ್ಸ ಗೌರವಾಧ್ಯಕ್ಷ ಮುನಿಯಪ್ಪ, ರುಪ್ಸ ಕಾರ್ಯದರ್ಶಿ ಎನ್.ಎಂ. ಲೋಕೇಶ್, ಜಂಟಿ ಕಾರ್ಯದರ್ಶಿ ಉಮಾಶಂಕರ್, ದಾವಣಗೆರೆ ದಕ್ಷಿಣ ಕ್ಷೇತ್ರದ ಶಿಕ್ಷಣಾಧಿಕಾರಿ ಎಂ. ನಿರಂಜನ ಮೂರ್ತಿ, ದಾವಣಗೆರೆ ಉತ್ತರ ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಅಂಬಣ್ಣ, ಸಿದ್ದಗಂಗಾ ಶಾಲೆಯ ಮುಖ್ಯೋಪಾಧ್ಯಾಯಿನಿ ಜಸ್ಟಿನ್ ಡಿಸೌಜ ಮತ್ತಿತರರು ಉಪಸ್ಥಿತರಿದ್ದರು.

ಬಿ. ವರುಣ ಗೌಡ ಪ್ರಾರ್ಥಿಸಿದರು. ಎ.ಎನ್. ಪ್ರಸನ್ನಕುಮಾರ್ ಸ್ವಾಗತಿಸಿದರು.

# ಸಾಮಾನ್ಯರಿಗೆ ಅರ್ಥವಾಗದ ಕಲೆ ನಿಷ್ಪ್ರಯೋಜಕ

## ಚಿತ್ರೋತ್ಸವ-22 ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ನಾಡೋಜ ಡಾ.ವಿ.ಟಿ. ಕಾಳೆ ಅಭಿಮತ

ದಾವಣಗೆರೆ, ಜು. 25- ಜನ ಸಾಮಾನ್ಯರನ್ನು ತಲುಪದ, ಅವರಿಗೆ ಅರ್ಥವಾಗದ ಕಲೆ ನಿಷ್ಪ್ರಯೋಜಕ ಎಂದು ಹಿರಿಯ ಕಲಾವಿದರೂ, ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷರೂ ಆದ ನಾಡೋಜ ಡಾ.ವಿ.ಟಿ. ಕಾಳೆ ಹೇಳಿದರು.

ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿರುವ ಚಿತ್ರೋತ್ಸವ-2022ರ ಕಲಾ ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಕಲಾವಿದರು ರಚಿಸುವ ಚಿತ್ರಗಳು ಸ್ವತಃ ಕಲಾವಿದರಿಗೇ ಅರ್ಥವಾಗುತ್ತಿಲ್ಲ. ಅಂತಹದ್ದರಲ್ಲಿ ಜನ ಸಾಮಾನ್ಯರನ್ನು ಮುಟ್ಟುವುದು ದೂರದ ಮಾತು. ಯಾವುದೇ ಕಲೆ ಜನ ಸಾಮಾನ್ಯರನ್ನು ತಲುಪಬೇಕು. ಆಗ ಮಾತ್ರ ಕಲೆ ಸಾರ್ಥಕತೆ ಪಡೆಯುತ್ತದೆ ಎಂದು ಹೇಳಿದರು.

ಕಳೆದ 60 ದಶಕಗಳ ಹಿಂದೆ ರಾಜ್ಯದಲ್ಲಿ ಕಲೆಗೆ ಅಷ್ಟಾಗಿ ಪ್ರೋತ್ಸಾಹ ಇರಲಿಲ್ಲ. ಕಲಾ ಶಾಲೆಗಳ ಸಂಖ್ಯೆ ಕಡಿಮೆ ಇತ್ತು. ಬೆರಳೆಣಿಕೆಯಷ್ಟು ಕಲಾವಿದರು ಮಾತ್ರ ಇದ್ದರು. ಆದರೆ ಇಂದು ಸಾಕಷ್ಟು ಕಲಾ ಶಾಲೆಗಳು, ಸಾವಿರಾರು ಕಲಾವಿದರು ಹೊರ ಬರುತ್ತಿದ್ದಾರೆ. ಶ್ರೇಷ್ಠ-ಕನಿಷ್ಟ ಎನ್ನಲಾಗದಷ್ಟು ಕಲಾಕೃತಿಗಳು ರಚನೆಯಾಗುತ್ತಿವೆ ಎಂದು ಹೇಳಿದರು.

ಕಲಾವಿದರಿಗೆ ತಾಳ್ಮೆ, ಪ್ರಾಮಾಣಿಕತೆ, ಶ್ರದ್ಧೆ ಹಾಗೂ ಪ್ರಾಮಾಣಿಕತೆ ಜೊತೆಗೆ ದೈವಬಲವೂ ಇದ್ದಾಗ ಯಶಸ್ಸು ಸಾಧ್ಯವಾಗುತ್ತದೆ. ಬೇರಾವುದೇ ಶೈಲಿಯ ಚಿತ್ರಗಳ ರಚನೆಗಿಂತ ತಮ್ಮದೇ ಆದ ಗುರಿ ಇಟ್ಟುಕೊಂಡು ಸಮಯ ಪ್ರಜ್ಞೆಯಿಂದ ಕಲಾ ಕೃತಿಗಳನ್ನು ರಚಿಸಬೇಕು. ಅನ್‌ಟೈಟಲ್ ಕೃತಿಗಳ ರಚನೆ ಸಲ್ಲದು ಎಂದು ಕಲಾ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನಾನೇ ಉತ್ತಮ ಕಲಾವಿದ ಎಂಬ ಅಹಂಕಾರ ಇರಬಾರದು. ದಾವಣಗೆರೆ ದೃಶ್ಯಕಲಾ ವಿದ್ಯಾರ್ಥಿಗಳ ಅತ್ಯುತ್ತಮ ಕಲಾಕೃತಿಗಳನ್ನು ನೋಡಿದಾಗ ನನ್ನಲ್ಲಿದ್ದ ಹಮ್ಮು-ಬಿಮ್ಮು ನೆಲ ಕಚ್ಚಿವೆ. ಕೇವಲ ಎರಡಕ್ಷರದ 'ಕಲೆ'ಯ ಆಳ ಮಹಾಸಾಗರದಷ್ಟು ಎಂಬುದನ್ನು ತಿಳಿದಿರಬೇಕು ಎಂದರು.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಕಾರ್ಯಕ್ರಮ ಉದ್ಘಾಟಿಸಿದರು. ದಾವಿವಿ ಕಲಾ ನಿಕಾಯದ ಡೀನ್ ಡಾ. ವೆಂಕಟರಾವ್ ಎಂ.ಪಲಾಟೆ, ವಿದ್ಯಾರ್ಥಿ ಮುಖಂಡ ಚಿರಂಜೀವಿ ಉಪಸ್ಥಿತರಿದ್ದರು. ದಾವಿವಿ ಸಂಯೋಜನಾಧಿಕಾರಿ ಡಾ.ಸತೀಶ್ ಕುಮಾರ್ ಪಿ.ವಲ್ಲೇಪುರೆ ಅತಿಥಿಗಳನ್ನು ಸ್ವಾಗತಿಸಿದರು. ವಿದ್ಯಾರ್ಥಿ ಮುಖಂಡ ಚಿರಂಜೀವಿ ಉಪಸ್ಥಿತರಿದ್ದರು. ದಾವಿವಿ ಫ್ಯಾನ್ ಡಿಸೈನ್ ವಿಭಾಗದ ಡಾ.ಜೈರಾಜ್ ಎಂ.ಚಿಕ್ಕಪಾಟೀಲ್ ವಂದಿಸಿದರು.



### ಚಿತ್ರೋತ್ಸವದಲ್ಲಿ 60ಕ್ಕೂ ಹೆಚ್ಚು ಕಲಾಕೃತಿಗಳು

ಚಿತ್ರೋತ್ಸವ -2022 ಕಲಾ ಪ್ರದರ್ಶನದಲ್ಲಿ ಪ್ರತಿ ವಿದ್ಯಾರ್ಥಿಯೂ ತಮ್ಮದೇ ಆದ ಕಲಾ ಸಂವೇದನೆಗಳಿಗೆ ಚಿತ್ರ, ಶಿಲ್ಪ, ಅನ್ವಯಿಕ ಕಲಾ ಮಾಧ್ಯಮದ ಮತ್ತು ಅನಿಮೇಷನ್ ಮಾಧ್ಯಮದ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ.

ಪ್ರದರ್ಶನದಲ್ಲಿರುವ ಕಲಾ ಕೃತಿಗಳಲ್ಲಿ ಬಹುಪಾಲು ಸಮಕಾಲೀನ ಕಲಾ ಶೈಲಿ ಮಾದರಿಯಲ್ಲಿರುವುದು ವಿಶೇಷ. ಶಿಲ್ಪಗಳೂ ಸಹ ಕೆಲವೊಂದು ಅರೆ ನೈಜ ಶೈಲಿಯಲ್ಲಿದ್ದರೆ ಮತ್ತೆ ಕೆಲವು ಸಾಂಕೇತಿಕವಾಗಿವೆ. ಅನ್ವಯಿಕ ಕಲಾ ವಿಭಾಗದ ವಿದ್ಯಾರ್ಥಿಗಳು ಕೌಶಲ್ಯ ಪೂರ್ಣ ಪೋಸ್ಟರ್ ರಚನೆ, ಭಾವಪೂರ್ಣ ಬ್ಯಾರಿಕೇಟರ್‌ಗಳು ಗಮನ ಸೆಳೆಯುತ್ತವೆ.

ಅನಿಮೇಷನ್ ಮಾಧ್ಯಮದಲ್ಲೂ ಸಹ ವಿದ್ಯಾರ್ಥಿಗಳು ತಮ್ಮ ತಂತ್ರ ಕೌಶಲ್ಯ ಅಭಿವ್ಯಕ್ತಗೊಳಿಸಲು ಶ್ರಮಿಸಿದ್ದಾರೆ. 2ರಿಂದ 3 ಅಡಿಯ 10ಕ್ಕೂ ಹೆಚ್ಚು ಕ್ಯಾನವಾಸ್ ಕಲಾಕೃತಿಗಳು ಅನಾವರಣಗೊಂಡಿವೆ. ಹೆಣ್ಣು - ಗಂಡಿನ ಸಂಬಂಧ, ಜನಪದೀಯ ಆಚರಣೆ, ಅಕ್ಷರ ಕಲಿಯುವ ಹೆಣ್ಣು ಮುಂತಾದ ವಿಷಯಾಧಾರಿತ ಕೃತಿಗಳು ಗಮನ ಸೆಳೆಯುತ್ತವೆ.

2021-22ರಲ್ಲಿ ದೃಶ್ಯ ಕಲಾ ವಿದ್ಯಾರ್ಥಿಗಳು ರಚಿಸಿದ ಆಯ್ದ 60ಕ್ಕೂ ಹೆಚ್ಚು ಕಲಾಕೃತಿಗಳನ್ನು ಪ್ರದರ್ಶನದಲ್ಲಿಡಲಾಗಿದೆ. 27ರವರೆಗೆ ಪ್ರದರ್ಶನ ನಡೆಯಲಿದೆ ಎಂದು ದೃಶ್ಯ ಕಲಾ ಮಹಾವಿದ್ಯಾಲಯದ ಉಪನ್ಯಾಸಕ ದತ್ತಾತ್ರೇಯ ಎನ್. ಭಟ್ ತಿಳಿಸಿದರು.

# ಹರಿಹರೇಶ್ವರ ದೇವಾಲಯಕ್ಕೆ ಅಗ್ನಿಶಾಮಕ ಮಹಾ ನಿರ್ದೇಶಕ ಭೇಟಿ



ಹರಿಹರ, ಜು. 25 - ನಗರದ ಪ್ರಸಿದ್ಧ ಐತಿಹಾಸಿಕ ದೇವಸ್ಥಾನ ಶ್ರೀ ಹರಿಹರೇಶ್ವರ ಮತ್ತು ಶ್ರೀ ಲಕ್ಷ್ಮೀ ದೇವಿಗೆ ಅಗ್ನಿಶಾಮಕ ಇಲಾಖೆಯ ಮಹಾ ನಿರ್ದೇಶಕ ಡಾ. ಅರುಣ್ ಕುಮಾರ್ ಪಾಂಡೆ, ಪೂರ್ವ ವಲಯ ಐಜಿಪಿ ತ್ಯಾಗರಾಜನ್ ಮತ್ತು ಎಸ್ಪಿ ಸಿ.ಬಿ. ರಿಷ್ಯಂತ್ ರವರು ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಡಿಷನಲ್ ಎಸ್ಪಿ ರಾಮಗೊಂಡ ಬಸರಗಿ, ವಿಪತ್ತು ರಕ್ಷಣಾ ಅಧಿಕಾರಿ ಗುರುಲಿಂಗಯ್ಯ, ಸಿಪಿಐ ತಿಮ್ಮಣ್ಣ, ಡೆಪ್ಯೂಟಿ ಕಮಾಡೆಂಟ್ ಜೆ. ಸಂದೀಪ್, ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್ಐ ಗುರುಬಸಪ್ಪ ಕುಸಲಾಪುರ, ಅರ್ಚಕರಾದ ಗುರು ಪ್ರಸಾದ್, ಶೇಷಾಚಲ, ಪೊಲೀಸ್ ಸಿಬ್ಬಂದಿಗಳಾದ ನಾಗರಾಜ್ ಶಿಂಗ್ರಿಹಳ್ಳಿ, ಮಂಜುನಾಥ್, ದ್ವಾರಕೀಶ್, ರಿಜ್ವಾನ್ ಹಾಗೂ ಇತರರು ಹಾಜರಿದ್ದರು.

# ಸಿಇಟಿ ಫಲಿತಾಂಶ

**(1ನೇ ಪುಟದಿಂದ)** ನಡೆಸಲಾಗಿತ್ತು' ಎಂದರು.

ಸಿಇಟಿ ಪರೀಕ್ಷೆ ನಡೆಸುವಾಗ ಸಿಬಿಎಸ್ ಸಿ ಮತ್ತು ಐಸಿಎಸ್‌ಇ ಪಠ್ಯಕ್ರಮದಲ್ಲಿ 12ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೂ ಅವಕಾಶ ಕೊಡಲಾಗಿತ್ತು. ಈಗ ಅವರ ಫಲಿತಾಂಶ ಬಂದಿದ್ದು, ಸಿಇಟಿ ಬರೆದಿದ್ದ ಈ ವಿದ್ಯಾರ್ಥಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ತಮ್ಮ ಅಂಕಗಳನ್ನು ನಾಳೆ (ಜು.26) ಸಂಜೆಯೊಳಗೆ ಅಪ್‌ಲೋಡ್ ಮಾಡಬೇಕು ಎಂದು ಅವರು ಹೇಳಿದ್ದಾರೆ. ಫಲಿತಾಂಶ ಪ್ರಕಟಗೊಂಡ ನಂತರ ವೈದ್ಯಕೀಯ ಶಿಕ್ಷಣ ಹೊರತುಪಡಿಸಿ, ಉಳಿದ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರವೇಶ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದರು.


## ಅಭಿನಂದನೆಗಳು



**ಸಹನ ಎಸ್.** (89.60%)
(ಪುಷ್ಪಮಹಾಲಿಂಗಪ್ಪ ಸ್ಕೂಲ್)



**ಮಹಾಜಬೀನ್** (89.28%)
(ಸೆಂಟ್ ಪಾಲ್ಸ್ ಸ್ಕೂಲ್)

ದಾವಣಗೆರೆ ನಗರದ ಭಾರತೀ ಆಕ್ಸಾಲೈಫ್ ಇನ್ಸೂರೆನ್ಸ್ ಕಂಪನಿಯ ಮ್ಯಾನೇಜರ್‌ಗಳಾದ **ಸಂತೋಷ್ ಬಾಬು ಆರ್.** ಹಾಗೂ **ಮಹಮದ್ ಖಾಲಿದ್** ಇವರುಗಳ ಮಕ್ಕಳಾದ **ಸಹನ ಎಸ್.** ಹಾಗೂ **ಮಹಾಜಬೀನ್** ಇವರುಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿರುತ್ತಾರೆ. ಇವರಿಗೆ ಅಭಿನಂದನೆಗಳನ್ನು ಕೋರುವವರು...

**ಭಾರತೀಯ ಆಕ್ಸಾ ಲೈಫ್ ಇನ್ಸೂರೆನ್ಸ್ ಸಿಬ್ಬಂದಿ ವರ್ಗ**
ಪಿ.ಬಿ. ರೋಡ್, ದಾವಣಗೆರೆ.


# ಮುರ್ಮು ಪ್ರಮಾಣ ವಚನದಲ್ಲಿ ಖರ್ಗೆಗೆ ಸೂಕ್ತ ಸ್ಥಾನವಿಲ್ಲ

## ಪ್ರತಿಪಕ್ಷಗಳ ಆರೋಪ ತಳ್ಳಿ ಹಾಕಿದ ಕೇಂದ್ರ

ನವದೆಹಲಿ, ಜು. 25 – ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೂಕ್ತ ಸ್ಥಾನ ಕಲ್ಪಿಸಿರಲಿಲ್ಲ ಎಂದು ಪ್ರತಿಪಕ್ಷಗಳ ಹಲವು ನಾಯಕರು ಆರೋಪಿಸಿದ್ದಾರೆ.

ಈ ಆರೋಪ ತಳ್ಳಿ ಹಾಕಿರುವ ಸರ್ಕಾರ, ರಾಜ್ಯಸಭೆಯ ಪ್ರತಿಪಕ್ಷದ ನಾಯಕನಿಗೆ ಸಂಪುಟ ಸಚಿವರಿದ್ದ ಮುಂದಿನ ಸಾಲಿನಲ್ಲೇ ಸ್ಥಾನ ಕಲ್ಪಿಸಲಾಗಿತ್ತು ಎಂದು ಹೇಳಿದೆ.

ರಾಜ್ಯಸಭಾಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಅವರಿಗೆ ಪತ್ರ ಬರೆದಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಖರ್ಗೆ ಅವರು ಹೊಂದಿರುವ ಸ್ಥಾನಮಾನಕ್ಕೆ ಸರಿಯಾಗಿ ಕುಳಿತುಕೊಳ್ಳುವ ವ್ಯವಸ್ಥೆ ಇರಲಿಲ್ಲ ಎಂದಿದ್ದಾರೆ.

ಈ ಬಗ್ಗೆ ಉತ್ತರಿಸಿರುವ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ, ಶಿಷ್ಟಾಚಾರದಲ್ಲಿ ಯಾವುದೇ ಉಲ್ಲಂಘನೆಯಾಗಿಲ್ಲ. ಪ್ರತಿಪಕ್ಷದ ನಾಯಕರು ಸಂಪುಟದ ಸಚಿವರ ನಂತರದ ಸ್ಥಾನದಲ್ಲಿ ಬರುತ್ತಾರೆ. ಹಾಗೆ ನೋಡಿದಾಗ ಅವರಿಗೆ ಮೂರನೇ ಸಾಲಿನಲ್ಲಿ ಸ್ಥಾನ ಕಲ್ಪಿಸಬೇಕಿತ್ತು. ಆದರೆ, ಖರ್ಗೆ ಅವರ ಹಿರಿತನ ಪರಿಗಣಿಸಿ ಮೊದಲ ಸಾಲಿನಲ್ಲೇ ಸ್ಥಾನ ಕಲ್ಪಿಸಲಾಗಿತ್ತು ಎಂದಿದ್ದಾರೆ. ಆದರೆ, ಈ ಸೀಟು ಮೂಲೆಯಲ್ಲಿದೆ ಎಂದು ಖರ್ಗೆ ಆಕ್ಷೇಪಿಸಿದ್ದರು. ಮಧ್ಯದ ಸ್ಥಾನಕ್ಕೆ ಬರುವಂತೆ ಅಲ್ಲಿನ ಸಿಬ್ಬಂದಿ ಮನವಿ ಮಾಡಿಕೊಂಡರು. ಆದರೆ, ಖರ್ಗೆ ಇದಕ್ಕೆ ನಿರಾಕರಿಸಿದರು ಎಂದು ಹೇಳಿದರು. ಅಲ್ಲದೇ, ನಿರ್ಗಮಿತ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಖರ್ಗೆ ಅವರಿಗೆ ಪ್ರಧಾನ ಮಂತ್ರಿ ಪಕ್ಕದ ಸ್ಥಾನವನ್ನೇ ನೀಡಲಾಗಿತ್ತು. ಆದರೆ, ಅವರು ಅಲ್ಲಿಗೆ ಬರಲು ನಿರಾಕರಿಸಿದರು ಎಂದು ಜೋಷಿ ಹೇಳಿದ್ದಾರೆ. ಇದು ರಾಷ್ಟ್ರಪತಿಯವರಿಗೆ ಮಾಡಿದ ಅವಮಾನವೂ ಆಗಿದೆ. ಈಗ ಇಲ್ಲದೇ ಇರುವುದನ್ನು ಕೆದಕಲಾಗುತ್ತಿದೆ ಎಂದು ಜೋಷಿ ಹೇಳಿದ್ದಾರೆ.


# VACANCY

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA TALLY / ERP / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

**HULLUMANE PROPERTIES & POWER PVT LTD.,**
# Depot Address - Beside Lalitha International School, Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
**Drop Resume to Email - hrhullumanepropertiespwr@yahoo.com**

## ಹೊನ್ನಾಳಿ : ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಗುರುಪೂರ್ಣಿಮೆ



ಹೊನ್ನಾಳಿ, ಜು. 25- ನಗರದ ಹಳೇಪೇಟೆ ಶ್ರೀ ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಗುರು ಪೂರ್ಣಿಮೆ ಆಚರಿಸಲಾಯಿತು. ದಾವಣಗೆರೆ ಪತಂಜಲಿ ಯೋಗ ಸಮಿತಿಯ ಜಿಲ್ಲಾ ಪ್ರಭಾರಿ ಸುನೀಲ್ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದಿನನಿತ್ಯ ಜೀವನದಲ್ಲಿ ಯೋಗವನ್ನು ರೂಢಿಸಿಕೊಳ್ಳಿ ಎಂದರು.

ಮಹೇಂದ್ರ ಬಳಿಗಾರ್, ಹೊನ್ನಾಳಿ ತಾ. ಪ್ರಭಾರಿ ಶ್ರೀಕಾಂತ್ ಕುರ್ಡೇಕರ್ ಮಾತನಾಡಿದರು. ಡಾ. ಜಿತೇಂದ್ರ ಬಿಸಾಟಿ, ಅರುಣ್‌ಕುಮಾರ್, ವಿಜಯ್, ಕಾಲೇಜು ಪ್ರಾಂಶುಪಾಲ ವಸಂತ್, ಯೋಗ ಶಿಕ್ಷಕ ಜಗದೀಶ್ ಆಚಾರ್, ಸುರೇಶ್ ಕುಂಬಾರ್, ಹೆಚ್.ಎಂ. ಉಮೇಶ್, ನರಸಿಂಹಪ್ಪ, ಹೆಚ್.ಎಂ. ಸುಜಾತ, ನೇತ್ರ, ರೇಣುಕಾ, ನಿರ್ಮಲ, ನಂದಿನಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಎಂ.ಬಿ. ರುದ್ರೇಶ್ ಸ್ವಾಗತಿಸಿದರು. ಪ್ರಕಾಶ್ ಹೆಬ್ಬಾರ್ ವಂದಿಸಿದರು.

## ಹರಪನಹಳ್ಳಿ ಉಚ್ಚಂಗೆಮ್ಮ ದೇವಸ್ಥಾನಕ್ಕೆ ಧರ್ಮಸ್ಥಳದಿಂದ 2 ಲಕ್ಷ ರೂ. ದೇಣಿಗೆ



ಹರಪನಹಳ್ಳಿ,ಜು.25- ಪಟ್ಟಣದ ಕೆಇಬಿ ಹತ್ತಿರದ ಶ್ರೀ ಉಚ್ಚಂಗೆಮ್ಮದೇವಿ ದೇವಸ್ಥಾನದ ಕಟ್ಟಡ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯ ಸಭಾ ಸದಸ್ಯರಾದ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಎರಡು ಲಕ್ಷ ರೂ.ಗಳ ದೇಣಿಗೆ ನೀಡಿದ್ದಾರೆ.

ಧರ್ಮಸ್ಥಳದ ಗ್ರಾಮಾಭಿವೃದ್ಧಿ ಜಿಲ್ಲಾ ನಿರ್ದೇಶಕ ಜನಾರ್ಧನ್, ಶಾಂತರಾಮ್, ವಿಠಲ್ ನಾಯಕ್, ಹರಿಹರ ತಾಲ್ಲೂಕು ಯೋಜನಾಧಿಕಾರಿ ಮಮತಾ, ವಲಯ ಮೇಲ್ವಿಚಾರಕರಾದ ಸುಮಾ ಅವರು ದೇಣಿಗೆಯ ಡಿ.ಡಿ. ನೀಡಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಟಿ.ತಿಮ್ಮಪ್ಪ ಮಾತನಾಡಿ, ದೇವಸ್ಥಾನ ನಿರ್ಮಾಣಕ್ಕೆ ಸಹಾಯ ನೀಡಿದಂತಹ ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯದರ್ಶಿ ಉಮೇಶ್, ಖಜಾಂಚಿ ಎಚ್.ಕೆಂಚಪ್ಪ, ಸಹ ಕಾರ್ಯದರ್ಶಿ ಡಿ.ಮಂಜಪ್ಪ, ಸದಾಶಿವಪ್ಪ ಪೂಜಾರ್, ಟಿ.ಹನುಮಂತ, ವೈ.ಪಾಪಣ್ಣ. ಜಿ.ಆನಂದ, ಜೆ.ಕುಮಾರ್, ಬಸವರಾಜ, ಟಿ. ಮಂಜುನಾಥ, ರವೀಂದ್ರ ಕನಕ ಇಂಟರ್ನೆಟ್ ಹರಪನಹಳ್ಳಿ ಭರಮಪ್ಪ ರಂಗಾಪುರ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಕಾರ್ಗಿಲ್ ವಿಜಯೋತ್ಸವ

ಪ್ರೇರಣಾ ಯುವ ಸಂಸ್ಥೆ ವತಿಯಿಂದ ಇಂದು ಬೆಳಿಗ್ಗೆ 10 ಕ್ಕೆ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಗುವುದು. ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಿಂದ ರಾಜ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಯಲಿದೆ.

# ಸಾಹಿತ್ಯದ ಬಗ್ಗೆಯೇ ಭೇದ-ಭಾವ ಬಿತ್ತುತ್ತಿರುವ ವಾಟ್ಸಾಪ್ ವೀರರು

### ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದ 2ನೇ ಗೋಷ್ಠಿಯಲ್ಲಿ ಡಾ. ಎಂ.ಜಿ.ಈಶ್ವರಪ್ಪ ಬೇಸರ

ದಾವಣಗೆರೆ, ಜು.25- ರಾಮಾಯಣ ಓದಿದರೆ ಹೇಗಿರಬೇಕೆಂದು ಹೇಳುತ್ತದೆ. ಮಹಾಭಾರತ ಓದಿದರೆ ಹೇಗಿರಬಾರದೆಂದು ಹೇಳುತ್ತದೆ. ವಚನ ಸಾಹಿತ್ಯ ಓದಿದರೆ ಮನುಷ್ಯರಾಗುತ್ತೀರಾ ಹೀಗೆಂದು ಸಾಹಿತ್ಯದ ಬಗ್ಗೆಯೇ ಭೇದ - ಭಾವವನ್ನು ಬಿತ್ತುವ ಕೆಲಸವನ್ನು ವಾಟ್ಸಾಪ್ ವೀರರು ಮಾಡುತ್ತಿದ್ದಾರೆ ಎಂದು ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಬೇಸರ ವ್ಯಕ್ತಪಡಿಸಿದರು.

ಬಂಡಾಯ ಸಾಹಿತ್ಯ ಸಂಘಟನೆ - ಕರ್ನಾಟಕ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯದಲ್ಲಿ ಸಮಾನತೆ ಮತ್ತು ಸಹಿಷ್ಣುತೆ ವಿಚಾರವಾಗಿ ನಡೆದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಮಾಯಣ, ಮಹಾಭಾರತವಾಗಲೀ, ಸಾಹಿತ್ಯವಾಗಲೀ ಮನುಷ್ಯರಾಗಿ ಎಂದು ಹೇಳುತ್ತವೆ. ಸಮಾನತೆ, ಸಹಿಷ್ಣುತೆ ಇರಲಿ ಎಂದು ಹೇಳುತ್ತವೆ. ಮನುಷ್ಯತ್ವವಿದ್ದು, ನೋವುಗಳ ಅನುಭವಿಸಿ ದೊಡ್ಡವರಾದವರನ್ನು ನೆನೆದು ದೊಡ್ಡವರಾಗಿ ಎಂಬ ಸಂದೇಶ ನೀಡುತ್ತವೆ ಎಂದು ತಿಳಿಸಿದರು.

ಸಂವಿಧಾನ ರೂಪಿಸಿರುವ, ಸಹೋದರತ್ವ ಭಾವವಿರುವ ಈ ದೇಶದಲ್ಲಿ ಕುವೆಂಪು ಅವರ ನಾಲ್ಕು ಸಾಲುಗಳು ಸಾಹಿತ್ಯದ ಸಂವಿಧಾನಗಳು. ಗುಡಿ, ಚರ್ಚ್, ಮಸೀದಿಗಳ ಬಿಟ್ಟು ಹೊರಬನ್ನಿ. ಧರ್ಮಗಳ ಮಧ್ಯೆ ಏರ್ಪಟ್ಟ ಸಂಘರ್ಷ ಹೋಗಲಾಡಿಸಲು ಧರ್ಮಗಳ ಮೀರಿ ಬರಬೇಕು. ಬಡತನವ ಬುಡಮಟ್ಟ ಕೀಳ ಬನ್ನಿ ಅಂದರೆ ದೇಶ ದೊಡ್ಡದಾಗಬೇಕಾದರೆ ಬಡತನ ಹೋಗಲಾಡಿಸಬೇಕು. ಮೌಢ್ಯತೆಯ ಮಾರಿಯನ್ನು ಹೊರದೂಡಲ್ಕೆತನ್ನಿ. ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ. ಈ ಸಾಲುಗಳ ಅನುಸರಿಸಿದರೆ ಅದ್ಭುತ ಸಮಾಜವಾಗಲಿದ್ದು, ಹೊಸ ರಾಷ್ಟ್ರ ನಿರ್ಮಿಸಬಹುದು ಎಂದು ಅಭಿಪ್ರಾಯಪಟ್ಟರು.



ದೇಶದ ತುಂಬಾ ಅಸಮಾನತೆ, ಅಸಹಿಷ್ಣುತೆ ಬಿತ್ತುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ನಾವೆಲ್ಲಾ ಪುನಃ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುವ ಪ್ರಯತ್ನವನ್ನು ಸಾಹಿತ್ಯ ಸಮ್ಮೇಳನದ ಮೂಲಕ ಮಾಡುತ್ತಿದ್ದೇವೆ ಎಂದು ಹೇಳಿದರು.

ಪರರ ವಿಚಾರ ಮತ್ತು ಧರ್ಮಗಳನ್ನು ಯಾರು ಸಹಿಸುತ್ತಾರೋ ಅವರು ಬಂಗಾರದಂತವರು. ಇವತ್ತು ನಮ್ಮ ದೇಶದಲ್ಲಿ ಎಲ್ಲೂ ಬಂಗಾರಗಳೇ ಇಲ್ಲ. ಬರೀ ಕಬ್ಬಿಣಗಳು. ಯಾವುದಕ್ಕೂ ಬಾರದಿರುವ ಲೋಹಗಳಾಗಲು ವಿಧಾನಸಭೆ ಮತ್ತು ಲೋಕಸಭೆಗೆ ಕಳಿಸಿದ್ದೇವೆ. ತಮ್ಮ ಬೇಳೆ ಬೇಯಿಸಿಕೊಳ್ಳಲು ಪರಸ್ಪರ ಮನುಷ್ಯರ ಮಧ್ಯೆ ವಿಷ ಬೀಜ ಬಿತ್ತಿ ವಿಕೃತಿಗಳ ನಿರ್ಮಾಣ ಮಾಡಿ ಆಟವಾಡು ತ್ತಿರುವುದು ಬೇಸರ ತಂದಿದೆ ಎಂದು ವಿಷಾಧಿಸಿದರು.

ಮಧ್ಯಕಾಲೀನ ಸಾಹಿತ್ಯದ ಕುರಿತು ಮಾತನಾಡಿದ ದಾದಾಪೀರ್ ನವಿಲೇಹಾಳ್, ವಚನ ಚಳುವಳಿಗೆ ಸಾಂಸ್ಕೃತಿಕ ಅಸ್ಮಿತೆ ಬಂದಿದ್ದರೆ, ಜಾತಿಯನ್ನು ಮೀರಿ ನೋಡಿದ ಕ್ರಮವೇ ಪ್ರಧಾನವಾಗಲಿದೆ. ಬಸವಣ್ಣ ಮತ್ತು ಸಾವಿರಾರು ಶರಣರು ಜಾತಿ ಮೂಲ ವಾದ ಶ್ರೇಷ್ಠತೆಯನ್ನು ಪ್ರಶ್ನಿಸುತ್ತಾ ಬಂದರು. ಲೇಖಕ, ವಚನಕಾರು ಜಾತಿ ವ್ಯವಸ್ಥೆ ವಿರುದ್ಧವಿದ್ದರೇ ಸಮಾನತೆಯ ಆಶಯಗಳನ್ನು ಹೊಂದಿದವರಾಗಿದ್ದಾರೆ ಎಂದರು.

ಸಮಕಾಲೀನ ಕನ್ನಡದ ಬಹಳಷ್ಟು ವಚನಕಾರರು ಮತ್ತು ಕವಿಗಳು ಪ್ರಭುತ್ವ ವಿರೋಧಿ ಅಥವಾ ಅಸಮಾನತೆಯ ವಿರೋಧಿ ನಡೆಗಳನ್ನು ಮತ್ತೆ ಮತ್ತೆ ಸಂದರ್ಭ ಬಂದಾಗಲೆಲ್ಲಾ ಯಾವುದೇ ಮುಜುಗರವಿಲ್ಲದೇ ನಿರ್ಮಾಣ ಮಾಡಿಕೊಂಡಿದ್ದಾರೆ. ಎಲ್ಲಾ ಕನ್ನಡದ ಗಟ್ಟಿ ಮತ್ತು ಶ್ರೇಷ್ಠ ಕವಿಗಳು ಸಾಂಸ್ಕೃತಿಕ ಸಂದರ್ಭವನ್ನು ಸಾಮಾಜಿಕ ವಿಶ್ಲೇಷಣೆಗೊಳಪಡಿಸುವ ಕ್ರಮವು ಸಮಾನತೆಯನ್ನು ಸಾರುವ ಕರ್ತೃವೇ ಆಗಿದೆ. ಎಲ್ಲಾ ಧರ್ಮಗಳನ್ನು ಮೀರಿ ಮನುಷ್ಯ ಧರ್ಮ ದೊಡ್ಡದೆಂಬ ಸೂಕ್ತ ನೆಲೆ ಇಡೀ ಕನ್ನಡ ಕೃತಿಗಳಲ್ಲಿ ದಟ್ಟವಾಗಿದೆ ಎಂದರು.

ಸ್ವಾತಂತ್ರ್ಯವೊಂದನ್ನು ಕಸಿದುಕೊಂಡರೆ ಸತ್ಯ, ಸ್ವಾತಂತ್ರ್ಯ, ಸಂವಿಧಾನವೂ ಬೇಡದಂತಾಗಿದೆ ಪ್ರಸ್ತುತ ಸಮಾಜದಲ್ಲಿ. ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಒರಟಾದ ತಂತ್ರಗಳನ್ನು ಇವತ್ತಿನ ವ್ಯವಸ್ಥೆ ತುಂಬಾ ಯೋಜನಾ ಬದ್ಧವಾಗಿ ಮಾಡುತ್ತಿದೆ. ಪೊಲೀಸರು, ನ್ಯಾಯಾಧೀಶರನ್ನು ಹದ್ದುಬಸ್ತಿನಲ್ಲಿಟ್ಟರೆ ಸಂವಿಧಾನ ತನ್ನಷ್ಟಕ್ಕೇ ತಾನೇ ಸತ್ತು ಹೋಗಲಿದೆ ಎಂಬ ಭಂಡತನದ ಕೆಲಸವಾಗುತ್ತಿದೆ. ಯಾರೂ ಸಹ ಉತ್ತಮ ಪ್ರಭುತ್ವ ಕೊಡಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ರಾಜಕಾರಣ ತಲುಪಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯದ ಆರೋಗ್ಯಪೂರ್ಣ ಆಲೋಚನೆಗಳು ಮನುಷ್ಯರ, ಜೀವ, ಸಮಾನತೆಯ ಪರವಾಗಿವೆ. ಪ್ರಧಾನ ಕವಿಗಳ ಶ್ರೇಷ್ಠ ಧ್ವನಿ ಸಮಾನತೆಯು ಗುಪ್ತ ಗಾಮಿನಿಯಾಗಿ ಹರಿಯುತ್ತಿದೆ. ಕನ್ನಡ ಸಾಹಿತ್ಯವು ಪ್ರಭುತ್ವದ ವಿರೋಧ ಧ್ವನಿಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಕಟಿಸುತ್ತಾ ಬಂದಿದೆ. ಇವತ್ತಿಗೂ ಕನ್ನಡದ ಬಹಳ ಶ್ರೇಷ್ಠ ಕವಿಗಳು ಪ್ರಭುತ್ವದ ವಿರೋಧಿಗಳೇ ಆಗಿದ್ದಾರೆ. ಆದರೆ, ಇಂತಹ ಪ್ರಭುತ್ವದ ವಿರೋಧವನ್ನು ರಾಷ್ಟ್ರದ ವಿರೋಧವೆನ್ನುವ ಪ್ರಯತ್ನಗಳಿಗೆ ಬಂಡಾಯದ ಧ್ವನಿ ಎಂದಿಗೂ ಇರಲಿದೆ ಎಂದರು.

ಪ್ರಾಚೀನ ಸಾಹಿತ್ಯದ ಬಗ್ಗೆ ಮಾತನಾಡಿದ ರಾಜಪ್ಪ ದಳವಾಯಿ, ಇಂದಿನ ದಿನಗಳಲ್ಲಿ ಅಸಹಿಷ್ಣುತೆ ತಾಂಡವವಾಡುತ್ತಿದ್ದು, ಸಹಿಷ್ಣುತೆ, ಸಹನೆ, ಪ್ರೀತಿಯ ವಿಷಯಗಳನ್ನು ಪಂಪನು ಹೇಳಿದಂತೆ ಬೇರೆ ಯಾವ ಕವಿಯೂ ಹೇಳಿಲ್ಲ. 5ನೇ ತರಗತಿಯಿಂದ ಸಂಶೋಧನಾ ವಿದ್ಯಾರ್ಥಿಗಳವರೆಗೂ ಸಮಾನತೆಯ ಆಶಯಗಳು ಕುಲದ ಮತ್ತು ಕರ್ಮದ ಸಂಘರ್ಷ ಸಹಿಷ್ಣುತಾ ರೂಪವಾಗಿ ಹೊಮ್ಮಿವೆ. ಎಲ್ಲಾ ಕನ್ನಡ ಕಾವ್ಯಗಳು ಸಮಾನತೆ ಆಶಯಗಳನ್ನು ಪ್ರತಿಪಾದನೆ ಮಾಡುತ್ತಿವೆ ಎಂದರು.

ಆಧುನಿಕ ಸಾಹಿತ್ಯ ಕುರಿತಾಗಿ ಮಮ್ತಾಜ್ ಬೇಗಂ, ಜನಪದ ಸಾಹಿತ್ಯ ಕುರಿತಾಗಿ ಕರಿಯಪ್ಪ ಮಾಳಿಗೆ ಮಾತನಾಡಿದರು. ಓ.ನಾಗರಾಜ್ ನಿರೂಪಿಸಿದರು. ಡಿ. ಅಂಜನಪ್ಪ ಸ್ವಾಗತಿಸಿದರು. ಪತ್ರಕರ್ತ ಜಿಗಳಿ ಪ್ರಕಾಶ್ ವಂದಿಸಿದರು.

# ಸ್ಕೂಲ್ ಬೆಲ್‌ನಿಂದ ನಂದಿತಾವರೆ ಸ್ಕೂಲ್‌ಗೆ ಪೇಂಟ್

ಮಲೇಬೆನ್ನೂರು, ಜು.25- ಕರ್ನಾಟಕದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸ್ಕೂಲ್ ಬೆಲ್, ಬೆಳಗಾವಿ ತಾಂತ್ರಿಕ ವಿಶ್ವ ವಿದ್ಯಾಲಯ, ಕ್ಯಾಂಪಸ್ ಟು ಕಮ್ಯುನಿಟಿ ತಂಡ ಪ್ರಸ್ತುತ ವರ್ಷ 75 ಶಾಲೆಗಳಿಗೆ ಬಣ್ಣಗಳಿಂದ ಸೌಂದರ್ಯೀಕರಣ ಮಾಡಲಾಗಿದೆ ಎಂದು ಸ್ಕೂಲ್ ಬೆಲ್ ತಂಡದ ಸಂಯೋಜಕ ಚಂದನ್ ಹೇಳಿದರು.



ನಂದಿತಾವರೆ ಗ್ರಾಮದ ಸ.ಹಿ.ಪ್ರಾ ಶಾಲೆಯಲ್ಲಿ ಸೌಂದರ್ಯೀಕರಣದ ಸಮಾರೋಪದಲ್ಲಿ ಮಾತನಾಡಿದರು.

ಈಗಾಗಲೇ 150 ಶಾಲೆಗಳನ್ನು ಬಣ್ಣಗಳಿಂದ ಚಂದಗೊಳಿಸಲಾಗಿದ್ದು, ತರಗತಿಗಳ ಪಾಠಕ್ಕೆ ತಕ್ಕಂತೆ ಕಾರ್ಟೂನ್‌ಗಳು, ಸ್ವಾತಂತ್ರ್ಯ ಯೋಧರು, ಕನ್ನಡ ಕವಿಗಳು, ಸಂಚಾರ ನಿಯಮಗಳು, ವನ್ಯಜೀವಿ, ಪರಿಸರ ಚಿತ್ರಗಳನ್ನು ಬಿಡಿಸಲಾಗುತ್ತದೆ. ಈ ವಿಶೇಷ ಕಾರ್ಯಕ್ಕೆ ಇಂಜಿನಿಯರ್ ವಿದ್ಯಾರ್ಥಿಗಳು ಸಾಥ್ ನೀಡುತ್ತಿದ್ದಾರೆ ಎಂದರು.

ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಹೆಗಡೆ ಮಾತನಾಡಿ, ಸಂಘ - ಸಂಸ್ಥೆಗಳು ನೀಡುವ ನೆರವು ಸದ್ಬಳಕೆಯಾಗಬೇಕು. ಮಕ್ಕಳ ಜ್ಞಾನಾರ್ಜನೆಗೆ ಪೂರಕವಾಗಬೇಕು ಎಂದರು.

ಮುಖ್ಯ ಶಿಕ್ಷಕ ಕೆ.ಬೀರಪ್ಪ ಮಾತನಾಡಿ, ದಾನಿಗಳ ಮತ್ತು ಎಸ್‌ಡಿಎಂಸಿ ಸದಸ್ಯರ ನೆರವಿನಿಂದ ಶಾಲೆಯು ಸೌಂದರೀಕರಣಗೊಂಡಿದೆ. ಸ್ವಾತಂತ್ರ್ಯ ಯೋಧರ ನೆನಪು ಮತ್ತೆ ನಿರಂತರ ಕಾಡುವಂತಾಗಿದೆ.

ಶಾಲಾ ಕೊಠಡಿ ಮತ್ತು ಗೋಡೆಗಳಲ್ಲಿ ಬಿಡಿಸಿದ ಚಿತ್ರಗಳನ್ನು ಕುಂಬಳೂರಿನ ಸ್ವಾತಂತ್ರ್ಯ ಯೋಧರ ಪತ್ನಿಯರಾದ ಹೊಟ್ಟೆಗೌಡ್ರ ವೀರಮ್ಮ, ನಾಗಮ್ಮನವರು ಗ್ರಾಮಸ್ಥರೊಂದಿಗೆ ವೀಕ್ಷಿಸಿ ಮೆಚ್ಚುಗೆಪಟ್ಟರು.

ಪತ್ರಕರ್ತ ಸದಾನಂದ ಮಾತನಾಡಿ ಅಂದು ಹೆಂಡದಂಗಡಿ ಪಿಕೆಟಿಂಗ್, ಕಾನೂನು ಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಉಪ್ಪಿನ ಸತ್ಯಾಗ್ರಹ, ಧ್ವಜ ಸತ್ಯಾಗ್ರಹ ಮತ್ತಿತರೆ ಹೋರಾಟಗಳಲ್ಲಿ ಭಾಗಿಯಾದ ಸ್ವಾತಂತ್ರ್ಯ ಯೋಧರ ಅನುಭವ ಅಪಾರವಾದುದು. ಇಂದು ಶಾಲಾವರಣ ತುಂಬಾ ಸುಂದರವಾಗಿ ಬಣ್ಣ ಹಾಕಿದ ಕಲಾವಿದರೇ ಆಧುನಿಕ ಸ್ವಾತಂತ್ರ್ಯ ವೀರರು ಎಂದು ತಿಳಿಸಿ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಬಿ.ಪಿ. ಹರೀಶ್, ಭೀಮಪ್ಪ, ರವಿ, ಭರಮಗೌಡ, ಪಾಟೀಲ್, ಬಾಪೂಜಿ ಇಂಜಿನಿಯರ್ ಕಾಲೇಜ್‌ನ ಪ್ರಾಧ್ಯಾಪಕ ಕೃಷ್ಣಕುಮಾರ್, ಕನ್ನಡ ಹೋರಾಟಗಾರ ಎಕ್ಕೆಗೊಂದಿ ಹೆಚ್.ಬಿ.ರುದ್ರಗೌಡ, ತಾಲ್ಲೂಕು ಶಿಬಿರಾರ್ಥಿ ಹರ್ಷಿತಾ, ಸ್ನೇಹ,

## ಕಾರ್ಗಿಲ್ ವಿಜಯೋತ್ಸವ

ಅಗಾಧ ಯೋಧರ ಶಕ್ತಿ
ವಿವೇಕಾನಂದರ ಯುಕ್ತಿ
ಯುವಕ ಯುವತಿಯರ ಶಕ್ತಿ
ಅದಾಗಲೇ ಬರುತ್ತೆ ನಮ್ಮ ದೇಶಕ್ಕೆ ಶಕ್ತಿ !!

ರೈತರೇ ದೇಶಕ್ಕೆ ಬೆನ್ನೆಲುಬು
ಅವರಿಗೆಲ್ಲ ನ್ಯಾಯಯುತ ಆತ್ಮ
ಸ್ಥೈರ್ಯ ತುಂಬ ಬೇಕು ಅವರೇ
ವಿಶ್ವ ಹಸಿದ...
ಜನರಿಗೆ ಅನ್ನಪ್ರಸಾದ ಕೊಡುವರು !!

ಹೀಗೆ ಸದಾ ಕಾಯಬೇಕು ಗಡಿಯನ್ನು
ದೇಶದ ಪ್ರತೀ ಇಂಚು ಜಾಗವನ್ನು
ಇಡೀ 130 ಕೋಟಿ ಪ್ರಜೆಗಳಿಗೆ
ಸುಭಿಕ್ಷೆಯ...
ಶ್ರೀರಕ್ಷೆ ಅದು ವೀರ ಯೋಧರಿಂದ !!

ಹೀಗೆ ಇರಬೇಕು ಪ್ರಜೆಗಳೆಲ್ಲರೂ
ಇಡೀ ದೇಶಕ್ಕೆ ಒಳಿತು ಮಾಡಬೇಕು
ಯುವಕ ಯುವತಿಯರು ಮಾಡಲೇಬೇಕು
ಪ್ರತಿಜ್ಞೆ ಮಾಡಿ...
ವೀರ ಯೋಧರಿಗೆ ಕೈ ಜೋಡಿಸಬೇಕು !!

ಗಡಿಭಾಗದಲ್ಲಿ ದಾಳಿಕೋರ ವೈರಿಗಳಿಗೆ ಕಲಿಗಳು
ವೈರಿ ಎದೆಯ ಸೀಳುವ ಮನುಷ್ಯರೂಪಿ ಹುಲಿಗಳು
ದೇಶಸೇವೆ ಈಶಸೇವೆ ಎಂದು ದುಡಿವ ಯೋಧರು
ಪ್ರಾಣತೆತ್ತು...
ನೆತ್ತರು ಸುರಿಸಿ ಪ್ರಾಣತ್ಯಾಗಿಗಳಾದ ಹುತಾತ್ಮರು!!

ನನ್ನ ದೇಶದ ಹೆಮ್ಮೆಯ ಮಡಿಲ ಕುಡಿಗಳು
ಭಾರತಾಂಬೆಯ ಅಮರ ವೀರಯೋಧರು
ಬಂದೂಕಿಗೆ ಬಂದೂಕಿನ ಉತ್ತರ ಕೊಟ್ಟವರು
ಭಾರತಾಂಬೆಗೆ...
'ಕಾರ್ಗಿಲ್ ವಿಜಯ' ತಂದು ಕೊಟ್ಟವರು!!

- ಟಿ. ಜಿ. ಸಂಗಮ್
ಗಣಿತ ಶಿಕ್ಷಕರು, ಕೊಟ್ಟೂರು

# ಬೆಲೆಗಳ ಏರಿಕೆಯಿಂದ ಜನಸಾಮಾನ್ಯರ ಬದುಕು ದುಸ್ತರ

### ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಡೋಂಗ್ರೆ

ಶಿವಮೊಗ್ಗ, ಜು. 25- ರಾಜ್ಯ ಮತ್ತು ಕೇಂದ್ರ, ಸರ್ಕಾರ ಆಡಳಿತ ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದ್ದು ಬೆಲೆ ಏರಿಕೆ ನಿಯಂತ್ರಿಸಲಾಗದೆ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಅಂತಹ ಸರ್ಕಾರಗಳ ಮುಂದೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ತೀವ್ರ ಹೋರಾಟದ ಅಗತ್ಯವಿದೆ ಮತ್ತು ಅದಕ್ಕಾಗಿ ರೂಪುರೇಷೆ ಸಿದ್ದಪಡಿಸಿಕೊಳ್ಳಬೇಕೆಂದು ಎಐಟಿಯುಸಿ ರಾಜ್ಯ ಸಮಿತಿ ಉಪಾಧ್ಯಕ್ಷ ಎಂ.ಸಿ. ಡೋಂಗ್ರೆ ಹೇಳಿದರು.

ಶಿವಮೊಗ್ಗ ನಗರದ ಭೋವಿ ಭವನದಲ್ಲಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಶನ್ (ಎಐಟಿಯುಸಿ ಸಂಯೋಜಿತ) ರಾಜ್ಯ ಸಮಿತಿಯಿಂದ ನಿನ್ನೆ ಆಯೋಜಿಸಿದ್ದ ಬಿಸಿಯೂಟ ತಯಾರಕ ಮಹಿಳೆಯರಿಗಿರುವ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರ ಕುರಿತು ಏರ್ಪಡಿಸಿದ್ದ ರಾಜ್ಯಮಟ್ಟದ ಸಂಘಟನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.



ಪ್ರಸ್ತುತ ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ದೇಶದ ಮಧ್ಯಮ ಮತ್ತು ಬಡಜನರ ಆರ್ಥಿಕ ಸ್ಥಿತಿ ಗಂಭೀರವಾಗಿದೆ. ವಿದ್ಯಾವಂತರಿಗೆ ಹಾಗೂ ದುಡಿಯುವ ಕೈಗಳಿಗೆ ಕೆಲಸ ಇಲ್ಲದಂತಾಗಿದೆ. ದೇಶ ಹಾಗೂ ಜನರು ಅನೇಕ ಸಮಸ್ಯೆಗಳಿಗೆ ಸಿಲುಕಿದ್ದರೂ ಜನರ ದಿಕ್ಕು ತಪ್ಪಿಸುವ ನಿಟ್ಟಿನಲ್ಲಿ ಹಿಜಾಬ್ ಸೇರಿದಂತೆ ಅನಗತ್ಯ ವಿಷಯಗಳನ್ನು ಸೃಷ್ಟಿಸಿ, ಜನರಲ್ಲಿ ಪರಸ್ಪರ ದ್ವೇಷಭಾವನೆ ಮೂಡಿಸುತ್ತಿರುವುದು ನಿಜಕ್ಕೂ ದುರಂತ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಅಧ್ಯಕ್ಷ ಹೊನ್ನಪ್ಪ ಮರಿಯಮ್ಮನವರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಟ್ಟಡ ಕಟ್ಟುವ ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ಸೇರಿದಂತೆ ಮತ್ತಿತರರು ಮಾತನಾಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಬಿಸಿಯೂಟ ತಯಾರಕರಿಂದ ಶಿವಮೊಗ್ಗ ನಗರದಲ್ಲಿ ಬೃಹತ್ ಹಕ್ಕೊತ್ತಾಯದ ಮೆರವಣಿಗೆ ನಡೆಸಲಾಯಿತು.

ಎಐಟಿಯುಸಿ ಸಂಘಟನೆಗೆ 100 ವರ್ಷ ದಾಟಿರುವ ಹಿನ್ನೆಲೆಯಲ್ಲಿ ಧ್ವಜಾರೋಹಣವನ್ನು ಎಐಟಿಯುಸಿ ರಾಜ್ಯ ಉಪಾಧ್ಯಕ್ಷರು ಹಾಗೂ ಮಹಿಳಾ ಮುಖಂಡರಾದ ಎಂ. ಜಯಮ್ಮ ನೆರವೇರಿಸಿದರು.

ಕಾರ್ಯಕ್ರಮದ ನಿರ್ವಹಣೆ ಮತ್ತು ಸ್ವಾಗತವನ್ನು ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ನೆರವೇರಿಸಿದರು. ವೇದಿಕೆಯಲ್ಲಿ ಬೆಳಲಗೆರೆ ರುದ್ರಮ್ಮ, ಶೈಲಜಾ, ಮಂಜುನಾಥ್, ಅಕ್ಕಮ್ಮ, ಪರಮೇಶ್ವರ ಹೊಸಕೊಪ್ಪ ಸೇರಿದಂತೆ ರಾಜ್ಯ ಸಮಿತಿಯ ಇತರೆ ಮುಖಂಡರು ಇದ್ದರು.

## ಸೇಂಟ್ ಜಾನ್ಸ್ ಶಾಲೆಯಲ್ಲಿ ರೈನ್ ಡೇ



ದಾವಣಗೆರೆ, ಜು.25- ಜಿನಿ, ಜಿನಿ ಸುರಿಯುತ್ತಿರುವ ಮಳೆ, ಮಳೆಗೆ ತಕ್ಕಂತೆ ಹಾಡು, ಪುಟ್ಟ ಕೈಯಲ್ಲೊಂದು ಛತ್ರಿ, ಹಾಡಿಗೆ ಅನುಸಾರವಾಗಿ ಕುಣಿಯುತ್ತಿದ್ದ ಶಿಕ್ಷಕಿಯರು... ಸುತ್ತಲೂ ಮಳೆ ವಾತಾವರಣ, ಮಕ್ಕಳ ನೃತ್ಯವನ್ನು ದೂರದಿಂದ ನೋಡುವ ಪೋಷಕರು, ಮಗುವಿನ ಡ್ಯಾನ್ಸನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು, ತಮ್ಮ ಸಂಬಂಧಿಗಳಿಗೆ ಹಂಚಿದರು.

ಇಂತಹದೊಂದು ಮಧುರ ಕ್ಷಣ ನಗರದ ಸೆಂಟ್ ಜಾನ್ಸ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಳೆಗಾಲವಾದ ಕಾರಣ ರೈನ್ ಡೇಯನ್ನು ಶನಿವಾರ ಶಾಲೆಯ ವೇದಿಕೆಯಲ್ಲಿ ಅದ್ದೂರಿಯಾಗಿ ನಡೆಯಿತು. ಛತ್ರಿ, ರೈನ್ ಕೋಟ್ ಹಾಕಿದ ಮಕ್ಕಳು ಮಳೆಯ ಸ್ವಾದವನ್ನು ಅನುಭವಿಸಿದರು. ತರಗತಿಯಲ್ಲಿಯೂ ಕೂಡ ಕೃತಕ ಮಳೆಯ ಅನುಭವವನ್ನು ಸೃಷ್ಟಿ ಮಾಡಲಾಗಿತ್ತು. ರೈನ್ ಡೇ ನಿಮಿತ್ತ ಪೋಷಕರಿಗೆ ಮೊದಲೇ ರೈನ್ ಕೋಟ್, ಛತ್ರಿಯನ್ನು ತರಲು ಹೇಳಲಾಗಿತ್ತು. ಅದರಂತೆ ಶನಿವಾರ ಮಕ್ಕಳು ರೈನ್ ಡೇಯಲ್ಲಿ ಭಾಗವಹಿಸಿದ್ದರು. ಮಕ್ಕಳ ನೃತ್ಯಕ್ಕೆ ಶಿಕ್ಷಕಿಯರು ಸಾಥ್ ನೀಡಿದ್ದರು. ಇನ್ನು ತೊದಲ ನುಡಿಯಲ್ಲಿ ಹಾಡುತ್ತಿದ್ದ ಮಕ್ಕಳು, ಹೆಜ್ಜೆಯನ್ನು ಅತ್ತಿಂದಿತ್ತ ಹಾಕುತ್ತಿದ್ದರೇ, ಶಿಕ್ಷಕಿಯರು ಅವರನ್ನು ಸರಿ ಮಾಡುವುದು ಸಾಹಸವೇ ಆಗಿತ್ತು.

ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ ಜ್ಯೋತಿ, ಕವಿತಾ, ಪ್ರೀತಾ ರೈ, ಭಾರತಿ ಸೇರಿದಂತೆ ಇತರರು ಇದ್ದರು.

## ಸಿಬಿಎಸ್‌ಇ ಪರೀಕ್ಷೆ: ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಜು. 25- ಸಿಬಿಎಸ್‌ಇ 10 ನೇ ತರಗತಿ ಪರೀಕ್ಷೆಯಲ್ಲಿ ನಗರದ ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಗೆ ಶೇ. 100 ರಷ್ಟು ಫಲಿತಾಂಶ ಬಂದಿದೆ. 2021-22 ನೇ ಸಾಲಿನಲ್ಲಿ ನಡೆದ ವಾರ್ಷಿಕ ಪರೀಕ್ಷೆಯಲ್ಲಿ 42 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎ1- 8, ಎ2- 10, ಬಿ1-14, ಬಿ2-05, ಸಿ1-05 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.


**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬಾಡಿಗೆ ಮನೆಗಳು ದೊರೆಯುತ್ತವೆ**
ನಿಜಲಿಂಗಪ್ಪ ಬಡಾವಣೆ, ಆಂಜನೇಯ ಬಡಾವಣೆ
3 ಬೆಡ್ ರೂಂ 1st ಫ್ಲೋರ್, 2 ಬೆಡ್ ರೂಂ, ಗ್ರೌಂಡ್ ಫ್ಲೋರ್
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ ಯುರೋ ಸ್ಕೂಲ್ ಹತ್ತಿರ 40x84 East, 35x75 North, 60x84 East, 70x84 East, 40 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110, 93410 14130

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಸೈಟುಗಳು ಮಾರಾಟಕ್ಕಿವೆ**
40x60 North, 40x60 South, 40x60 West, J.H ಪಟೇಲ್ ಬಡಾವಣೆಯಲ್ಲಿ 40x60 East ಬನಶಂಕರಿ ಲೇಔಟ್‌ನಲ್ಲಿ 40x60 West, ಇಂಡೋರ್ ಸ್ಟೇಡಿಯಂ ಹತ್ತಿರ
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130, 99166 12110

**ಭಟ್ಟರು ಬೇಕಾಗಿದ್ದಾರೆ**
ತಂದೂರಿ ರೊಟ್ಟಿ ಮಾಡಲು ಭಟ್ಟರು ಬೇಕಾಗಿದ್ದಾರೆ
99648 29394

**ಗ್ಯಾಸ್ ಗೀಜರ್, ವಾಟರ್ ಪ್ಯೂರಿಫೈಯರ್ ರಿಪೇರಿಗಾಗಿ**
ಗ್ಯಾಸ್ ಗೀಜರ್ & ವಾಟರ್ ಪ್ಯೂರಿಫೈಯರ್ ಖರೀದಿಗೆ
ಮರುತ್ ಸರ್ವೀಸ್ ಸೆಂಟರ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು ದಾವಣಗೆರೆ
98458 67574, 98451 58798

**ಬೇಕಾಗಿದ್ದಾರೆ**
ಹರಿಹರ (ಗುತ್ತೂರು)ದಲ್ಲಿರುವ ಪೆಟ್ರೋಲ್ ಬಂಕ್‌ಗೆ ಸಂಜೆ ವೇಳೆ ಹುಡುಗರು ಬೇಕಾಗಿದ್ದಾರೆ.
ವೇತನ : 9,000/-
80502 19547

**WANTED**
Experienced Tally Operator, Attractive Salary, Full Time Job, only For Male
70190 73080

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿ 2 ಬೆಡ್ ರೂಂ, ಅಟ್ಯಾಚ್ ಬಾತ್ ರೂಂ, ವಾಸ್ತು ಪ್ರಕಾರ ವುಳ್ಳ ಬೋರ್‌ವೆಲ್ ಮುನ್ಸಿಪಲ್ ನೀರಿನ ಸೌಕರ್ಯವುಳ್ಳ, ಪೂರ್ವಕ್ಕೆ ಬಾಗಿಲು ಸೋಲಾರ್ ನೀರಿನ ಸೌಲಭ್ಯವುಳ್ಳ 1200 ಚದುರ ಮನೆ ಕುವೆಂಪು ನಗರದ ಬಾಪೂಜಿ ಹೈಸ್ಕೂಲ್ ಹಿಂಭಾಗ, ಮೇನ್ ರೋಡ್‌ಗೆ, 5ನೇ ಕ್ರಾಸ್, 3993/105 "ವಿನಯ"
70190 89694

**ಬೇಕಾಗಿದ್ದಾರೆ**
ನುರಿತ ಟೈಲರಿಂಗ್ ಶಿಕ್ಷಕಿಯರು, ಕಂಪ್ಯೂಟರ್ ಶಿಕ್ಷಕಿಯರು, ವಾಹನ ಚಾಲಕರು, ಶಿಕ್ಷಕಿಯರು, ಆಫೀಸ್ ಕ್ಲರ್ಕ್ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಪರ್ಕಿಸಿ :
ಎಸ್.ಎನ್. ಪಬ್ಲಿಕ್ ಸ್ಕೂಲ್
B1 : ವಿಜಯನಗರ, ಆರ್.ಟಿ.ಓ.ಕಛೇರಿ ಎದುರು ಏರ್ ಟೆಲ್ ಹತ್ತಿರ, 3ನೇ ಕ್ರಾಸ್, ದಾವಣಗೆರೆ.
B2 : ಜೀಜಾಮಾತಾ ಕಾಲೋನಿ, ಹರ್ಲಾಪುರ, ಹರಿಹರ.
73493 97287, 97417 46205

**ಜಮೀನುಗಳು ಮಾರಾಟಕ್ಕಿವೆ**
ಕೊಟ್ಟೂರು ರಸ್ತೆ, ಚಿಗಟೇರಿ ಸರ್ಕಲ್ ಹತ್ತಿರದ ಬೆಣ್ಣೆಹಳ್ಳಿ ಗ್ರಾಮದಲ್ಲಿರುವ 6 ಎಕರೆ ಕೆಂಪು ಖುಷ್ಕಿ ಜಮೀನು ಹಾಗೂ 3 ಎಕರೆ ಎರೆಹೊಲ ಬೆಣ್ಣೆಹಳ್ಳಿ ಗ್ರಾಮದಿಂದ ಬಲಕ್ಕೆ 2 ಕಿ.ಮಿ. ರಸ್ತೆಗೆ ಲಗತ್ತಾಗಿರುವ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
Honnurswamy Vanjre
87926 04196

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಷೇರು ಬಾಂಡ್ ಕಳೆದಿದೆ**
ದಾವಣಗೆರೆ ತಾಲ್ಲೂಕು ಕುಕ್ಕವಾಡದಲ್ಲಿರುವ ದಾವಣಗೆರೆ ಷುಗರ್ ಕಂಪನಿಗೆ ಸೇರಿದ T. ಚಂದ್ರಪ್ಪ ಬಿನ್ ದೊಡ್ಡಹಾಲಪ್ಪ, ಕಾರಿಗನೂರು, ಚನ್ನಗಿರಿ ತಾ. ರವರ ಹೆಸರಿನಲ್ಲಿರುವ ಷೇರು ಬಾಂಡ್ ಸಂಖ್ಯೆ. 706 ಇದು ಕಳೆದಿದ್ದು ಸಿಕ್ಕವರು ಈ ವಿಳಾಸಕ್ಕೆ ಸಂಪರ್ಕಿಸಿ:
70221 76122

**ಹೆಚ್ ಕೆ.ಬಿ.ಎನ್ ಎಗ್ ಸೆಂಟರ್**
ನಮ್ಮಲ್ಲಿ ಹೋಲ್‌ಸೇಲ್ ದರದಲ್ಲಿ ಮೊಟ್ಟೆಗಳು ದೊರೆಯುತ್ತವೆ. ಬೇಕರಿ, ಹೋಟೆಲ್, ಆಮ್ಲೆಟ್ ಸ್ಟಾಲ್, ಮತ್ತು ಕಿರಾಣಿ ಅಂಗಡಿಗಳಿಗೆ ಡೋರ್ ಡಿಲಿವರಿ ಕೊಡುತ್ತೇವೆ. ನಾವು ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆಗಳನ್ನು ಹೋಲ್‌ಸೇಲ್ ದರದಲ್ಲಿ ನೀಡುತ್ತೇವೆ. ಕಳೆದ 25 ವರ್ಷಗಳಿಂದಲೂ ನಿಮ್ಮಗಳ ವಿಶ್ವಾಸ ಪೂರ್ಣ ಸೇವೆಯಲ್ಲಿದ್ದೇವೆ.
98862 09429, 77607 39030
99002 56658

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ಹಳೇಪೇಟೆಯಲ್ಲಿ ಮನೆ ಮಾರಾಟಕ್ಕಿದೆ**
16.3/4x86=1440.5 # 977/1
ಉತ್ತರಾಭಿಮುಖವಾಗಿರುವ ನೆಲಮಹಡಿ ಮತ್ತು ಮೊದಲನೆ ಮಹಡಿ ಮನೆಯು ದಾವಣಗೆರೆಯ ಮಹಾನಗರದಲ್ಲಿರುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
93434 75963, 97401 63814

**ಹೆಸರು ಬದಲಾವಣೆ**
ಶ್ರೀ ನಾಗರಾಜ್ ಎಚ್. ರಾಯ್ಕರ್ ಆದ ನಾನು ತಿಳಿಸುವುದೇನೆಂದರೆ ನನ್ನ ಮಗಳಿಗೆ ನನ್ನ ಕುಟುಂಬ ವರ್ಗದವರೆಲ್ಲಾ ಸೇರಿ ಎ. ಆದ್ವಿಕಾ ಎನ್. ರಾಯ್ಕರ್ ಎಂದು ನಾಮಕರಣ ಮಾಡಿರುತ್ತೇವೆ. ಆದರೇ ನನ್ನ ಮಗಳ ಜನನ ಪ್ರಮಾಣ ಪತ್ರದಲ್ಲಿ ಮಗಳ ಹೆಸರು ಆದ್ವಿಕಾ ಎನ್. ರಾಯ್ಕರ್ ಎನ್ನುವುದರ ಬದಲಾಗಿ ಆದ್ವಿಕಾ ಅಲಿಯಾಸ್ ಆದ್ವಿಕಾ ಎನ್. ರಾಯ್ಕರ್ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ದಿನಾಂಕ : 25.7.22ರಂದು ನೋಟರಿಯವರ ಸಮ್ಮುಖದಲ್ಲಿ ಅವಳ ಹೆಸರನ್ನು ಆದ್ವಿಕಾ ಎನ್. ರಾಯ್ಕರ್ ಎಂಬುದಾಗಿ ತಿದ್ದುಪಡಿಸಿದ್ದೇವೆ. ಇನ್ನು ಮುಂದೆ ಇವಳ ಹೆಸರು ಆದ್ವಿಕಾ ಎನ್. ರಾಯ್ಕರ್ ಎಂಬುದಾಗಿ ಮುಂದುವರೆಯುತ್ತದೆ.

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI | ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray | ಆಪರೇಷನ್ ಟೆಕ್ನಾಲಜಿ DOT
ಡಿಪ್ಲೊಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ. ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಸುಕ್ಷೇತ್ರ ಗಾಣಗಟ್ಟೆ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೇಯಸ್ ಭಟ್ - 81232 83279
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಹಣಕಾಸಿನ ಸಮಸ್ಯೆ, ಲೈಂಗಿಕ, ಸಂತಾನ, ವಶೀಕರಣ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ.
ವಿ. ಸೂ : ನಿಮ್ಮ ಕೆಲಸ ಆಗದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು.
ವಿಳಾಸ : ಹಳೇ ಆರ್.ಟಿ.ಓ ಆಫೀಸ್ ಹತ್ತಿರ, ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ದಾವಣಗೆರೆ.

BASIC - 450/-
DTP - 450/-
TALLY - 900/-
74062 78270

**ಮನೆಗಳು ಬಾಡಿಗೆಗಿವೆ**
ಮನೆ ಸಂ. 142, 5ನೇ ಕ್ರಾಸ್ 'ಸಿ' ಬ್ಲಾಕ್ ದೇವರಾಜ ಅರಸ್ ಬಡಾವಣೆ ದಾವಣಗೆರೆ ಇಲ್ಲಿ ಮೊದಲನೆಯ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ನ ಎರಡು ಮನೆಗಳು ಬಾಡಿಗೆಗೆ ದೊರೆಯುತ್ತವೆ.
94488 97446


## ಹೊನ್ನಾಳಿಯಲ್ಲಿ ಇಂದು ಕಾರ್ಗಿಲ್ ವಿಜಯ ದಿವಸ್ ಆಚರಣೆ

ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗು ವುದು.

ಕನಕದಾಸ ವೃತ್ತ ದೇವನಾಯಕನಹಳ್ಳಿಯಿಂದ ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ ತಾಲ್ಲೂಕು ಮಿನಿ ವಿಧಾನಸೌಧ, ಕೆನರಾ ಬ್ಯಾಂಕ್ ಸರ್ಕಲ್, ದುರ್ಗಿಗುಡಿ ಸರ್ಕಲ್ ಮೂಲಕ ಸೈನಿಕರ ಪ್ರತಿಮೆವರೆಗೆ ಬೈಕ್ ರ್‍ಯಾಲಿ ಏರ್ಪಡಿಸಲಾಗಿದೆ.

ಸೈನಿಕರ ಪ್ರತಿಮೆಗೆ ಮಾಲಾರ್ಪಣೆ, ಹುತಾತ್ಮ ವೀರ ಯೋಧರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ. ವಾಸಪ್ಪ ತಿಳಿಸಿದ್ದಾರೆ.

# ಎಂಸಿಸಿ 'ಬಿ' ಬ್ಲಾಕ್‌ನ ಒಳಾಂಗಣ ಈಜುಕೊಳ ಅಭಿವೃದ್ಧಿಪಡಿಸಲು ಆಗ್ರಹ



**ಜಿ.ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದ ತಂಡದಿಂದ ಡಿಸಿಗೆ ಮನವಿ**

ದಾವಣಗೆರೆ, ಜು.25- ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಒಳಾಂಗಣ ಕ್ರೀಡಾಂಗಣ ಕಳೆದ ಮೂರು ವರ್ಷಗಳಿಂದಲೂ ಜನರ ಉಪಯೋಗಕ್ಕೆ ಬರುತ್ತಿಲ್ಲ. ಆದಷ್ಟು ಬೇಗ ಜನರ ಬಳಕೆಗೆ ಸಿಗುವಂತೆ ಮಾಡಬೇಕು ಎಂದು ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದ ತಂಡವು ಜಿಲ್ಲಾಧಿಕಾರಿ ಅವರನ್ನು ಒತ್ತಾಯಿಸಿತು.

ದಾವಣಗೆರೆಗೆ ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುವ ಶಿವಾನಂದ ಕಪಾಸಿ ಅವರನ್ನು ಭೇಟಿ ಮಾಡಿ ಶುಭ ಕೋರಿದ ವೇಳೆ ಈ ಆಗ್ರಹ ಮಾಡಲಾಗಿದೆ.

ಈಜುಕೊಳವು ಕ್ರೀಡಾಪಟುಗಳಿಗೆ, ಸ್ಥಳೀಯರಿಗೆ ಅನುಕೂಲ ಆಗಿತ್ತು. ಮಹಾನಗರ ಪಾಲಿಕೆಯ ಆಡಳಿತ ವರ್ಗದ ನಿರ್ಲಕ್ಷ್ಯದಿಂದಾಗಿ ಹಾಳಾಗಿದೆ. ಈ ಬಗ್ಗೆ ಪಾಲಿಕೆ ಹಾಗೂ ಈ ಹಿಂದಿನ ಜಿಲ್ಲಾಧಿಕಾರಿ ಮಹಾಂತೇಶ್ ಆರ್. ಬೀಳಗಿ ಅವರಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನ ಆಗಿಲ್ಲ. ಈಗ ನೀವು ಬಂದಿದ್ದು, ಈ ಈಜುಕೊಳ ಅಭಿವೃದ್ದಿಪಡಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮಂಜುನಾಥ್ ಅವರು ಮನವಿ ಮಾಡಿದರು.

ನಗರದ ಗುಂಡಿ ಚೌಟ್ರಿ ಪಕ್ಕದ ರಸ್ತೆಯೂ ಹಾಳಾಗಿದ್ದು, ಜನರು ಓಡಾಡಲು ಕಷ್ಟ ಎಂಬಂತಾಗಿದೆ. ಗುಂಡಿಗಳು ಬಿದ್ದಿರುವ ಕಾರಣ ಮಳೆ ಬಂದಾಗ ಅಲ್ಲಲ್ಲಿ ನೀರು ನಿಲ್ಲುತ್ತಿದೆ. ಸೊಳ್ಳೆ ಕಾಟವೂ ಹೆಚ್ಚಾಗಿದೆ. ಇಲ್ಲಿಯೇ ತಳ್ಳುವ ಗಾಡಿಗಳಲ್ಲಿ ತಿಂಡಿ ವ್ಯಾಪಾರ ಮಾಡಲಾಗುತ್ತದೆ. ನೀರು ನಿಲ್ಲುವ ಕಾರಣ ಮಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯಾದಂತ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದೆ. ಆದಷ್ಟು ಬೇಗ ಅನುದಾನ ನೀಡಿ ರಸ್ತೆ ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿದರು.

ರಸ್ತೆಯಲ್ಲಿ ರಾತ್ರಿ ವೇಳೆ ಓಡಾಡೋದು ತುಂಬಾನೇ ಕಷ್ಟ. ಸ್ವಲ್ಪ ಯಾಮಾರಿದರೂ ಗುಂಡಿಗಳಲ್ಲಿ ಬೀಳುತ್ತಾರೆ. ಈಗಾಗಲೇ ಕೆಲವರು ಬಿದ್ದು ಗಾಯಗೊಂಡಿದ್ದಾರೆ. ಕೂಡಲೇ ರಸ್ತೆ ಅಭಿವೃದ್ಧಿಪಡಿಸುವಂತೆ ಒತ್ತಾಯಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್, ಉದಯ್ ಕುಮಾರ್, ಪಾಮೇನಹಳ್ಳಿ ನಾಗರಾಜ್, ಕೊಟ್ರಯ್ಯ, ಜಗದೀಶ್, ಮಾಗಾನಹಳ್ಳಿ ಪರಶುರಾಮ್ ಮತ್ತಿತರರು ಹಾಜರಿದ್ದರು.

# ಇತಿಹಾಸ ಅಧ್ಯಯನ ಅಗತ್ಯ: ಶಾಸಕ ರವೀಂದ್ರನಾಥ್



ದಾವಣಗೆರೆ, ಜು. 25- ಭಾರತೀಯ ಪರಂಪರೆ, ಸಂಸ್ಕೃತಿ, ಸಂಸ್ಕಾರಗಳನ್ನು ಒಳಗೊಂಡ ಇತಿಹಾಸದ ಅಧ್ಯಯನ ಮತ್ತು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದೆ. ಇತಿಹಾಸದಿಂದಲೇ ದೇಶ ಉಳಿದಿರುವುದು ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಬಸವನಕೋಟೆ ಗೌಡ್ರು ವಂಶಸ್ಥರ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಬಿ.ಎಸ್. ಸಿದ್ದೇಶ್ ಅವರ 'ಶ್ರೀ ಬೊಮ್ಮಲಿಂಗೇಶ್ವರ ಭಕ್ತರ ಹಿನ್ನೆಲೆ' ಕುರಿತ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಾತ್ಮಿಕ ಮತ್ತು ಪೂರ್ವಜರ ನೆಲೆಗಳ ಬಗ್ಗೆ ಬಸವನಕೋಟೆ ಬಿ.ಎಸ್. ಸಿದ್ದೇಶ್ ಅವರು ಸಂಶೋಧನೆ ಮಾಡಿ ಬರೆದಿರುವ ಪುಸ್ತಕವನ್ನು ಸದುಪಯೋಗ ಪಡಿಸಿಕೊಳ್ಳುವ ಜೊತೆಗೆ ಯುವ ಪೀಳಿಗೆಗೆ ಇತಿಹಾಸ ಪರಿಚಯಿಸುವ ಪ್ರಯತ್ನ ಮಾಡಬೇಕೆಂದರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಬರದ ನಾಡು ಜಗಳೂರು ಇದೀಗ ನೀರಾವರಿಯತ್ತ ಮುಖ ಮಾಡಿದೆ. ಇದಕ್ಕೆ ಕಾರಣ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ನಿರಂತರ ಪ್ರಯತ್ನ ಮತ್ತು ರೈತರ ಮೇಲಿರುವ ಕಾಳಜಿ ಎಂದರು. ನಾಡಿನ ಪ್ರಮುಖ ಕೆರೆಗಳಿಗೆ ನೀರು ತುಂಬಿಸುವ ಶ್ರೀಗಳ ಮಹತ್ವದ ಯೋಜನೆ ಸಫಲವಾಗಿದ್ದು, ರೈತರ ಬದುಕಿಗೆ ನೆರವಾಗಿದ್ದಾರೆ ಎಂದು ಹೇಳಿದರು.

ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ.ಹೆಚ್.ವಿ. ವಾಮದೇವಪ್ಪ ಮಾತನಾಡಿ, ಅಧ್ಯಾತ್ಮಿಕ ಚಿಂತನೆಯನ್ನು ಒಳಂಡ ಸಂಶೋಧನಾ ಗ್ರಂಥದ ಮೂಲಕ ಧಾರ್ಮಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವನ್ನು ಕೃತಿಕಾರ ಸಿದ್ದೇಶ್ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಕೃತಿ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಿದ ಬಿ.ಎಂ. ಸಿದ್ದೇಶ್ ಅವರು, ಶ್ರೀ ಬೊಮ್ಮಲಿಂಗೇಶ್ವರ ದೇವರ ಇತಿಹಾಸ, ಪೂರ್ವಜರ ನೆಲೆಗಳು, ಬಸವನಕೋಟೆ ಸುತ್ತಮುತ್ತಲಿನ 12 ಹಳ್ಳಿಗಳಲ್ಲಿನ ದೇವಸ್ಥಾನಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಎಂದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಸಿ.ಹೆಚ್. ಮುರಿಗೇಂದ್ರಪ್ಪ ಮಾತನಾಡಿ, 'ಶ್ರೀ ಬೊಮ್ಮಲಿಂಗೇಶ್ವರ ಭಕ್ತರ ಹಿನ್ನೆಲೆ' ಇದೊಂದು ಸಂಶೋಧನಾ ಕೃತಿಯಾಗಿದ್ದು, ಪ್ರತಿಯೊಬ್ಬರೂ ಕೊಂಡು ಓದಿ ಯುವ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ಗ್ರಾಮೀಣ, ಪೂರ್ವಜರ ಮತ್ತು ಭಾವೈಕ್ಯತೆಯ ನೆಲೆಗಟ್ಟಿನ ಮೇಲೆ ಬೊಮ್ಮಲಿಂಗೇಶ್ವರ ದೇವರ ಕೃತಿ ರಚನೆಗೊಂಡಿದ್ದು, ಇದೊಂದು ಆಕರ ಗ್ರಂಥವಾಗಿದೆ. ಸಿದ್ದೇಶ್ ಅವರಿಂದ ಮತ್ತಷ್ಟು ಗ್ರಂಥಗಳು ಹೊರ ಬರಲಿ ಎಂದು ಆಶಿಸಿದರು.

ಪ್ರಾಧ್ಯಾಪಕ ಬಸವರಾಜ ಹನುಮಲಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಕೃತಿಕಾರ ಬಿ.ಎಸ್. ಸಿದ್ದೇಶ್ ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿ ಕೃತಿ ಕುರಿತು ಮಾತನಾಡಿದರು.

# ಹೊನ್ನಾಳಿ ಟಿಎಪಿಸಿಎಂಎಸ್‌ಗೆ ವಿಶಾಲಾಕ್ಷಿ ಉಪಾಧ್ಯಕ್ಷೆ



ಹೊನ್ನಾಳಿ, ಜು. 25 - ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಚಿಕ್ಕೇರಹಳ್ಳಿ ವಿಶಾಲಾಕ್ಷಿ ಮಲ್ಲಿಕಾರ್ಜುನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹೆಚ್.ಎನ್. ಬಸವರಾಜಪ್ಪನವರ ರಾಜೀ ನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಸಹಕಾರ ಸಂಘದ ಅಧ್ಯಕ್ಷ ಯೋಗೇಶ್, ನಿರ್ದೇಶಕರುಗಳಾದ ಮಾಜಿ ಶಾಸಕ ಶಾಂತನಗೌಡರು, ಈಶ್ವರಪ್ಪ, ಸುರೇಶ್, ಗಣೇಶ, ಗಜೇಂದ್ರಪ್ಪ, ಮಲ್ಲೇಶಪ್ಪ, ಅನಿಲ್, ಮಂಜುನಾಥ್, ಶೇಖರಪ್ಪ, ಬಸವರಾಜಪ್ಪ, ನಾಗಮ್ಮ, ಕಾರ್ಯದರ್ಶಿ ಮುರುಗೇಶ್ ಇದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್.ಲೇಔಟ್ ಎ ಮತ್ತು ಬಿ ಬ್ಲಾಕ್, ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮಿ ಲೇಔಟ್, ಬಾಲಾಜಿ ನಗರ, ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜು, ಬಸವನಗುಡಿ, ಎಂಬಿಎ ಕಾಲೇಜು, ಆಫೀಸರ್ಸ್ ಕ್ಲಬ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 4 ರವರೆಗೆ ವಿದ್ಯುತ್ ಇರುವುದಿಲ್ಲ.

# ಹರಪನಹಳ್ಳಿ : ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾಗಿ ಜಿ.ನಂಜನಗೌಡ



ಹರಪನಹಳ್ಳಿ, ಜು.25- ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ರಾಜ್ಯ ಆಡಳಿತ ಮಂಡಳಿಯ ನಿರ್ದೇಶಕರಾಗಿ ವಿಜಯನಗರ ಜಿಲ್ಲೆಯಿಂದ ಪಟ್ಟಣದ ಬಿಜೆಪಿ ಮುಖಂಡ ಜಿ.ನಂಜನಗೌಡ ಆಯ್ಕೆಯಾಗಿದ್ದಾರೆ.

ಕಲಬುರಗಿ ಪ್ರಾಂತ ಮತ ಕ್ಷೇತ್ರದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಆಡಳಿತ ಮಂಡಳಿಗೆ ನಡೆದ ಸಾಮಾನ್ಯ ಚುನಾವಣೆಯಲ್ಲಿ ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆ ಎಂದು ರಿಟರ್ನಿಂಗ್ ಅಧಿಕಾರಿ ಪ್ರಮಾಣ ಪತ್ರ ನೀಡಿದ್ದಾರೆ.

ಈ ಸಂದರ್ಭದಲ್ಲಿ ವಿಶ್ವಬಂಧು ಸೌಹಾರ್ದ ಸಹಕಾರಿ ಬ್ಯಾಂಕ್ ವತಿಯಿಂದ ನಂಜನಗೌಡ ಅವರನ್ನು ಬ್ಯಾಂಕಿನ ಅಧ್ಯಕ್ಷ ಬಿ. ಮಂಜುನಾಥ, ಉಪಾಧ್ಯಕ್ಷೆ ಶೈಲಜಾ ದೇವರಾಜ್ ಹಾಗೂ ಬ್ಯಾಂಕಿನ ನಿರ್ದೇಶಕರು ಸನ್ಮಾನಿಸಿದರು.

ನಿರ್ದೇಶಕರಾದ ಹುಣಿಸಿಹಳ್ಳಿ ಪ್ರಕಾಶ್, ಬಸವನಗೌಡ, ಕುಸುಮಾ ಜಗದೀಶ್, ರೆಡ್ಡಿಗೌಡ್ರು, ವ್ಯವಸ್ಥಾಪಕ ಪ್ರಶಾಂತ್, ಪಿ. ಬೆಟ್ಟನಗೌಡ್ರು, ಓಂಕಾರಗೌಡ, ಮೂಕಾಂಬಿಕ ಸಿದ್ಧೇಶ್, ಪಟ್ಟಣಶೆಟ್ಟಿ, ಎಂ.ಜೆ.ಎಂ. ಶಿವಕುಮಾರ್ ಚೆನ್ನನಗೌಡ್ರು, ರಾಗಿಮಸಲವಾಡ ರೇವಣಸಿದ್ದಪ್ಪ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಹಾಜರಿದ್ದರು.

# ವಿದ್ಯಾರ್ಥಿಗಳ ಸಾಧನೆಗೆ ಪ್ರೋತ್ಸಾಹಿಸಿ



**ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಕರೆ**

ಹರಪನಹಳ್ಳಿ, ಜು. 25- ವಿದ್ಯಾರ್ಥಿಗಳ ಸಾಧನೆಯನ್ನು ಪ್ರೋತ್ಸಾಹಿಸಿ ಸಹಕರಿಸಿದರೆ ಮುಂದಿನ ವಿದ್ಯಾಭ್ಯಾಸಕ್ಕೆ ಉತ್ತೇಜನ ದೊರಕುತ್ತದೆ ಎಂದು ತೆಗ್ಗಿನ ಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಟಿ.ಎಂ.ಎ.ಇ. ಸಂಸ್ಥೆಯ ಭಂಗಿ ಬಸಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಜೀವನ ಶೈಲಿ ರೂಪಿಸಿಕೊಳ್ಳುವ ರಹದಾರಿ ಪಿಯುಸಿಯ ವ್ಯಾಸಂಗದ ಮೇಲೆ ನಿರ್ಧಾರವಾಗುತ್ತದೆ. ಇಂತಹ ಸಮಯದಲ್ಲಿ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಉನ್ನತ ಮಟ್ಟದ ವ್ಯಾಸಂಗ ಪಡೆಯಲು ಅನುವು ಮಾಡಿಕೊಡುವುದು ಶಿಕ್ಷಕರ ಹಾಗೂ ಪೋಷಕರ ಕರ್ತವ್ಯವಾಗಿದೆ ಎಂದರು. ವಿಜ್ಞಾನ ವಿಭಾಗದ ದ್ವಿತೀಯ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದ ಕುತಿಜಾಲ ಕುಬ್ರ ಸೇರಿದಂತೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 13 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು, ತೆಗ್ಗಿನ ಮಠ ಸಂಸ್ಥಾನದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರಯ್ಯ, ಪ್ರಾಂಶುಪಾಲ ಅರುಣಕುಮಾರ, ಕೆ.ವಿ. ಉಪ ಪ್ರಾಚಾರ್ಯ ಟಿ.ಎಂ. ಪ್ರತೀಕ್ ಹಾಗೂ ಪೋಷಕರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಪ್ರಾತ್ಯಕ್ಷಿಕೆ - ಉಪನ್ಯಾಸ

ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಆಶ್ರಯದಲ್ಲಿ ನಡೆಯುತ್ತಿರುವ ಚಿತ್ರೋತ್ಸವ 2022 ಕಾರ್ಯಕ್ರಮದಡಿ ಇಂದು ಬೆಳಿಗ್ಗೆ 11 ಗಂಟೆಗೆ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ನಡೆಯಲಿದೆ. ದಾವಣಗೆರೆ ವಿವಿ ಕುಲಸಚಿವ ಡಾ. ಕೆ. ಶಿವಶಂಕರ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ರವಿಚಂದ್ರ, ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ ಆಗಮಿಸುವರು. ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಅನಿಮೇಷನ್ ಮತ್ತು ಮಲ್ಟಿಮೀಡಿಯಾ ವಿಷಯ ಕುರಿತು ಬಿ.ಎನ್. ಮಲ್ಲೇಶ್ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಡಾ. ಸತೀಶಕುಮಾರ್ ಪಿ. ವಲ್ಲೇಪುರ ಅವರುಗಳು ಉಪಸ್ಥಿತರಿರುವರು.

# ನಗರದಲ್ಲೂ ಗಮನ ಸೆಳೆಯುವ ಕಾರ್ಯಕ್ರಮ ನಡೆಯಲಿ



**ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಿನೇಶ್ ಶೆಟ್ಟಿ ಆಶಯ**

ದಾವಣಗೆರೆ, ಜು.25- ಕೊರೊನಾಕ್ಕಿಂತ ಮುಂಚಿನ ದಿನಗಳಲ್ಲಿ ದಾವಣಗೆರೆಯಲ್ಲೂ ಅತ್ಯುತ್ತಮ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಾ ಬಂದಿದ್ದು, ಕೊರೊನಾ ನಂತರ ಪ್ರಥಮವಾಗಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿರುವುದನ್ನು ಜಿಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್‌ಕೆ.ಶೆಟ್ಟಿ ಪ್ರಶಂಸಿದರು.

ನಗರದ ಕಲಾಕಲ್ಪ ಆರ್ಟ್ ಅಕಾಡೆಮಿ ಮತ್ತು ವಿ-ಯೂನಿಯನ್ ಇವೆಂಟ್ ಅವರು ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ನನ್ನಮ್ಮ ನಂ-1 ಅಂತಿಮ ಸ್ಪರ್ಧಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದಾವಣಗೆರೆ ಕಲಾವಿದರಿಗೆ, ಕ್ರೀಡಾ ಪಟುಗಳಿಗೆ ಸದಾ ಪ್ರೋತ್ಸಾಹ ನೀಡುತ್ತಿರುವ ನಗರ. ಇಲ್ಲಿನ ನಾಗರಿಕರ ಪ್ರೋತ್ಸಾಹವನ್ನು ಅನೇಕ ಕಲಾವಿದರು, ಕ್ರೀಡಾ ಪಟುಗಳು ನೆನಪಿಸಿಕೊಳ್ಳುತ್ತಾರೆ. ಸ್ಪರ್ಧಾ ಕಾರ್ಯಕ್ರಮಗಳು ದಾವಣಗೆರೆಯಲ್ಲಿ ಅವಶ್ಯಕತೆ ಇದ್ದು, ನನ್ನಮ್ಮ ನಂ-1 ಹೆಸರಿನಲ್ಲಿ ಕಾರ್ಯಕ್ರಮ ಜನರ ಮನಸ್ಸನ್ನು ಗೆದ್ದಿದೆ. ಇಂತಹ ಕಾರ್ಯಕ್ರಮಗಳಿಂದ ಪ್ರತಿಭೆಗಳನ್ನು ಗುರುತಿಸಬಹುದಾಗಿದೆ ಎಂದರು.

ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ಶಕುಂತಲಾ ಗುರುಸಿದ್ದಯ್ಯ ಮಾತನಾಡಿ, ಕಲಾಕಲ್ಪ ಆರ್ಟ್ ಅಕಾಡೆಮಿ ಮತ್ತು ವಿ-ಯೂನಿಯನ್ ಇವೆಂಟ್‌ನವರು ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮಾಲೀಕರಾದ ಟಿ.ಎಸ್.ಎಸ್. ಸ್ವಾಮಿ, 'ಪದವಿ ಪೂರ್ವ' ಚಿತ್ರತಂಡದ ನಿರ್ಮಾಪಕ ಡಾ. ರವಿ ಶಾಮನೂರು, ನಿರ್ದೇಶಕ ಹರೀಶ್, ಚಿತ್ರ ನಟ ಪೃಥ್ವಿ ಶಾಮನೂರು, ಕಲಾಕಲ್ಪ ಕಲಾ ಶಾಲೆಯ ಅಧ್ಯಕ್ಷ ಐನಹಳ್ಳಿ ವಿಶ್ವಪ್ರಕಾಶ್ ಉಪಸ್ಥಿತರಿದ್ದರು.

ನನ್ನಮ್ಮ ನಂಬರ್ 1 ಗ್ರ್ಯಾಂಡ್ ಫಿನಾಲೆ ಸ್ಪರ್ಧೆಯಲ್ಲಿ ಇಪ್ಪತ್ತು ಜನ ಸ್ಪರ್ಧಿಸಿದ್ದು, ಇದರಲ್ಲಿ ವಿಜೇತರಾಗಿ ಸೌಮ್ಯ ಹರೀಶ್ ಹಾಗೂ ಪ್ರಥಮ ರನ್ನರ್ ಅಪ್ ಕೆ. ಬಿ. ವಿಜಯಲಕ್ಷ್ಮಿ ಹಾಗೂ 2ನೇ ರನ್ನರ್ ಅಪ್ ಮಾಲಾ ರವಿ, ಶ್ವೇತಾ ಎಸ್, ಪದ್ಮಪ್ರಿಯ. ಸ್ವೀಕರಿಸಿದರು. ತೀರ್ಪುಗಾರರಾಗಿ ರೇಖಾ ನಾಗರಾಜ್, ಹೇಮಾ ಶ್ರೀನಿವಾಸ್, ಪ್ರೀತಿ ಮಾಗಾನಳ್ಳಿ, ಭಾರತಿ ಕೇಶವ್, ಪ್ರಸನ್ನ ಉಪಸ್ಥಿತರಿದ್ದರು.

ವೃದ್ಧರಿಗೆ ಹಾಗೂ ಬಾಪೂಜಿ ಹಾಸ್ಪಿಟಲ್ ನರ್ಸ್‌ರವರನ್ನು ಸನ್ಮಾನಿಸಲಾಯಿತು. ವಿಜಯಕುಮಾರ್, ಜ್ಞಾನಿಕ ಐನಳ್ಳಿ ನಿರೂಪಿಸಿದರು. ಕಲಾಕಲ್ಪ ಕಲಾ ಶಾಲೆಯ ಶುಭಾ ಐನಹಳ್ಳಿ ವಿಶ್ವಪ್ರಕಾಶ್, ವಿ- ಯೂನಿಯನ್ ಇವೆಂಟ್ಸ್‌ನ ವಿವೇಕ್ ಎಂ.ಪಿ, ಹ್ಯಾಪಿ ಈವೆಂಟ್ಸ್‌ನ ಕಾರ್ತಿಕ್ ಹಿರೇಮಠ ಕಾರ್ಯಕ್ರಮ ನಡೆಸಿಕೊಟ್ಟರು.

# ಆಗಸ್ಟ್ 15 ರಂದು ಪ್ಲಾಸ್ಟಿಕ್ ಧ್ವಜ ನಿಷೇಧ

ದಾವಣಗೆರೆ, ಜು.25- ಬರುವ ಆಗಸ್ಟ್ 15 ರಂದು ಆಚರಿಸಲಿರುವ ಸ್ವಾತಂತ್ರ್ಯೋತ್ಸವ ದಿನಾಚರಣೆಯಂದು ಪ್ಲಾಸ್ಟಿಕ್ ಧ್ವಜವನ್ನು ಉಪಯೋಗಿಸದಂತೆ ಮನವಿ ಮಾಡಿದ್ದು, ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವಂತಹ ಅಂಗಡಿ ಮಾಲೀಕರುಗಳ ವಿರುದ್ಧ ಪ್ಲಾಸ್ಟಿಕ್ ಅಧಿನಿಯಮ 2016 ಹಾಗೂ ಪರಿಸರ ಸಂರಕ್ಷಣಾ ಕಾಯ್ದೆ 1985ರಡಿಯಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಸಿ.ಎನ್. ಮಂಜಪ್ಪ ತಿಳಿಸಿದ್ದಾರೆ.

# ನಗರದಲ್ಲಿಂದು 24 ನೇ ಕಾರ್ಗಿಲ್ ವಿಜಯೋತ್ಸವ

ದಾವಣಗೆರೆ, ಜು. 25- ಜಿಲ್ಲಾ ಮಾಜಿ ಸೈನಿಕರ ಸಂಘದ ವತಿಯಿಂದ ನಾಳೆ ದಿನಾಂಕ 26 ರಂದು ಸಂಜೆ 6 ಗಂಟೆಗೆ 24 ನೇ ಕಾರ್ಗಿಲ್ ವಿಜಯೋತ್ಸವ ಹಾಗೂ ಹುತಾತ್ಮರಿಗೆ ನಮನ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಪಿಸಾಳೆ ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಮಾಜಿಕ ಕಾರ್ಯಕರ್ತ ಕಾರ್ಕಳದ ಆದರ್ಶ ಗೋಖಲೆ ಅವರು ಕಾರ್ಗಿಲ್ ವಿಜಯ ದಿವಸ್ ಕುರಿತು ಉಪನ್ಯಾಸ ನೀಡಲಿದ್ದಾರೆ. ಇದೇ ವೇಳೆ ಪಂಜಿನ ಪ್ರದರ್ಶನ ಕೂಡ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಮನೋಹರ ಮಹೇಂದ್ರಕರ್, ಮುಖಂಡರಾದ ಎನ್.ಎಂ. ಬಸಪ್ಪ ಎಲೆಬೇತೂರು, ಷಣ್ಮುಖಪ್ಪ ಸೊಕ್ಕೆ, ಮಹಮದ್ ರಫಿ ಆಲೂರು ಮತ್ತಿತರರಿದ್ದರು.

## ಓದುಗರ ಪತ್ರ

### ಬೆಣ್ಣೆ ದೋಸೆ ನಗರ ಸಮಂಜಸವೇ ?

ಮಾನ್ಯರೆ,

ವ್ಯಾಪಾರ ಮತ್ತು ಕೈಗಾರಿಕಾ ನಗರವಾಗಿದ್ದ ದಾವಣಗೆರೆ ನಗರವನ್ನು ಮಾಧ್ಯಮಗಳು ಬೆಣ್ಣೆ ದೋಸೆ ನಗರ ಎಂದ ಕರೆಯತ್ತಿರುವುದು ಸಮಂಜಸವೇ ?

ಹತ್ತಿ ಮತ್ತು ಶೇಂಗಾ ವ್ಯಾಪಾರದ ಪ್ರಮುಖ ನಗರವಾಗಿದ್ದು, ಅದಕ್ಕೆ ಪೂರಕವಾಗಿ ನೂಲು, ಬಟ್ಟೆಯನ್ನು ಹಾಗೂ ಶೇಂಗಾ ಎಣ್ಣೆ, ರೀಫೈನ್ಡ್ ಆಯಿಲ್, ಡಾಲ್ಡಾ, ಸೋಪು ತಯಾರು ಮಾಡುವ ಹಲವಾರು ಕಾರ್ಖಾನೆಗಳು ಇದ್ದವು. ಈ ಉತ್ಪನ್ನಗಳು ದೇಶ-ವಿದೇಶಗಳಲ್ಲಿ ಪ್ರಖ್ಯಾತವಾಗಿ ನಗರಕ್ಕೆ ಕೀರ್ತಿ ಲಭಿಸಿತ್ತು. ಅದೇ ಸಮಯದಲ್ಲಿ ವಿದ್ಯಾ ಕ್ಷೇತ್ರದಲ್ಲಿಯೂ ಸಹ ಛಾಪು ಮೂಡಿಸುತ್ತಲಿದ್ದು, ಇಂತಹ ಪ್ರಸಿದ್ದ ನಗರವನ್ನು ಕೇವಲ ಬಾಯಿ ರುಚಿಯ, ತಿನ್ನುವ ಬೆಣ್ಣೆ ದೋಸೆ ನಗರವನ್ನಾಗಿ ಪ್ರಚಾರ ಮಾಡುವುದು ಸರಿಯೇ ?

ಬದಲಾವಣೆ ಕಾಲಚಕ್ರದ ನಿಯಮವಾಗಿ ಅಕ್ಕಿ ತಯಾರು ಮಾಡುವ ಹಲವಾರು ಮಿಲ್‌ಗಳು ಮತ್ತು ವಿದ್ಯೆ ಹಾಗು ಆರೋಗ್ಯ ಕ್ಷೇತ್ರ, ಆಟೋ ಮೊಬೈಲ್, ಬಟ್ಟೆ ಇತರೆ ಕ್ಷೇತ್ರಗಳಲ್ಲಿಯೂ ಈಗ ಪ್ರಗತಿ ಸಾಧಿಸಿದೆ. ಈ ಸಾಧನೆಗಳನ್ನು ಮಾಧ್ಯಮಗಳು ದಯಮಾಡಿ ಗಮನಿಸಿ ಸೂಕ್ತವಾದ ಹೆಮ್ಮೆಯ ಹೆಸರಿನ ನಗರವನ್ನಾಗಿಸಲಿ.

- ಚರಲಿಂಗಯ್ಯ ಹಂಜಗಿಮಠ್, ದಾವಣಗೆರೆ.

# ಅನುತ್ತೀರ್ಣಗೊಂಡ ವಾಣಿಜ್ಯ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ

ದಾವಣಗೆರೆ, ಜು. 25- ನಗರದ ರಂಜಿತ್‌ಮಲ್ ಗಾಂಧಿ ಎಜುಕೇಷನಲ್ ಟ್ರಸ್ಟ್ ವತಿಯಿಂದ 2022ರ ಸಾಲಿನಲ್ಲಿ ವಾಣಿಜ್ಯ ವಿಭಾಗದ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಇದೇ ದಿನಾಂಕ 29ರಂದು ಮಧ್ಯಾಹ್ನ 2 ಗಂಟೆಗೆ ಉಚಿತ ತರಬೇತಿ ತರಗತಿಗಳನ್ನು ಆಯೋಜಿಸಲಾಗಿದೆ.

ನಗರದ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಪ್ರೊ. ಪಿ.ಎಸ್. ಶಿವಪ್ರಕಾಶ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ವೇತಾ ಆರ್. ಗಾಂಧಿ ತಿಳಿಸಿದ್ದಾರೆ. ಮಾಹಿತಿಗಾಗಿ ಆರ್. ನರೇಂದ್ರ (86187 75339) ಹಾಗೂ ಬಿ.ಟಿ. ರಶ್ಮಿ (98442 40247) ಇವರನ್ನು ಸಂಪರ್ಕಿಸಬಹುದಾಗಿದೆ.

## ನಗರದಲ್ಲಿಂದು ರೈತರಿಗೆ ತಾಂತ್ರಿಕ ವಿಚಾರ ಸಂಕಿರಣ

ಜಿಲ್ಲಾ ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ರೈತ ಸ್ವ-ಸಹಾಯ ಗುಂಪಿನ ಮಹಿಳಾ ಉತ್ಪಾದಕರ ಗುಂಪುಗಳ ಸಹಯೋಗದೊಂದಿಗೆ ರೈತರಿಗೆ ತಾಂತ್ರಿಕ ವಿಚಾರ ಸಂಕಿರಣವು ಇಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಚನ್ನಪ್ಪ ಉದ್ಘಾಟಿಸುವರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಚಂದ್ರಶೇಖರ್ ಸುಂಕದ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳು : ಡಾ. ಟಿ. ಆರ್. ವೀರೇಶ್, ಪಿ. ರಮೇಶ್, ಎನ್. ಎಂ. ಭೋಜರಾಜ್, ಡಾ. ಬಿ.ಜಿ. ಗುರುಶಾಂತಪ್ಪ, ಡಾ. ಕೆ.ಜಿ. ಸತೀಶ್, ಡಾ.ಜಿ.ಟಿ.ನವೀನ್‌ಕುಮಾರ್.

## ನಗರದಲ್ಲಿ ಇಂದು ಸವೀ ಡೈನ್ ಚಿತ್ರಕೂಟ

ದಾವಣಗೆರೆ ಚಿತ್ರಕಲಾ ಪರಿಷತ್ತು ವತಿಯಿಂದ ಇಂದು ಸಂಜೆ 5.30 ಕ್ಕೆ ಸವೀ ಡೈನ್ ಚಿತ್ರಕೂಟ 'ಊಟದ ಜತೆ ಪೇಂಟಿಂಗ್ ಸ್ವಾದ' ಯುವ ಕಲಾವಿದರ ಚಿತ್ರ ಪ್ರದರ್ಶನ ವಿನೂತನ ಕಾರ್ಯಕ್ರಮ ನಡೆಯಲಿದೆ.

ಐಎಂಎ ಅಧ್ಯಕ್ಷ ಡಾ. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಹೆಗಡೆ ಡಯಾಗ್ನಾಸ್ಟಿಕ್ ಸೆಂಟರ್‌ನ ಡಾ.ಎಸ್.ಆರ್. ಹೆಗಡೆ, ಸವೀ ಡೈನ್ ಮಾಲೀಕ ಮಹೇಶ್ ಶೆಟ್ಟಿ ಭಾಗವಹಿಸಲಿದ್ದು, ಚಿತ್ರಕಲಾ ಪರಿಷತ್ ಅಧ್ಯಕ್ಷ ಸದಾನಂದ ಹೆಗಡೆ ಅಧ್ಯಕ್ಷತೆ ವಹಿಸುವರು. ಸ್ವಸ್ತಿ ಆರ್ಟ್ ಗ್ಯಾಲರಿಯ ರವಿ ಉದ್ಧಾರ ಅವರ ಶಿಷ್ಯರು ಹಾಗೂ ಹಜರತ್ ಅಲಿ ಅವರ ಚಿತ್ರಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗಿದೆ ಎಂದು ಚಿತ್ರಕಲಾ ಪರಿಷತ್ ಕಾರ್ಯದರ್ಶಿ ಶೇಷಾಚಲ ದುಗ್ಗಾವತಿ ತಿಳಿಸಿದ್ದಾರೆ.

# ನಗರದಲ್ಲಿ ನಾಳೆ ಹಡಪದ ಅಪ್ಪಣ್ಣ ಶರಣರ ಜಯಂತ್ಯೋತ್ಸವ

ದಾವಣಗೆರೆ, ಜು.25- ಶಿವಶರಣ ನಿಜಸುಖಿ ಹಡಪದ ಅಪ್ಪಣ್ಣ ಶರಣರ 888ನೇ ಜಯಂತ್ಯೋತ್ಸವ ಕಾರ್ಯಕ್ರಮವು ನಾಡಿದ್ದು ದಿನಾಂಕ 27ರ ಬುಧವಾರ ಬೆಳಿಗ್ಗೆ 10 ಗಂಟೆಗೆ ನಗರದ ಶಿವಯೋಗಾಶ್ರಮದಲ್ಲಿ ಜರುಗಲಿದೆ. ಡಾ. ಶಿವಮೂರ್ತಿ ಮುರುಘಾ ಶರಣರು, ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶ್ರೀಗಳು, ಕೂಡಲಸಂಗಮ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಬೈಲೂರು ನಿಷ್ಕಲ ಮಂಟಪದ ಶ್ರೀ ನಿಜಗುಣ ಸ್ವಾಮೀಜಿ, ತಂಗಡಿಗಿ ಕ್ಷೇತ್ರದ ಶ್ರೀ ಅನ್ನದಾನ ಭಾರತಿ ಬಸವಪ್ರಿಯ ಹಡಪದ ಅಪ್ಪಣ್ಣ ಸ್ವಾಮೀಜಿ, ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮುಕುಂದೂರು ವಿರಕ್ತ ಮಠದ ಡಾ. ಮಹಾಂತ ಬಸವಲಿಂಗ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು.

ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷ ಹೆಚ್. ಶಶಿಧರ ಬಸಾಪುರ ಅಧ್ಯಕ್ಷತೆ ವಹಿಸುವರು. ಮುಖ್ಯಅತಿಥಿಗಳಾಗಿ ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ದೂಡಾ ಆಯುಕ್ತ ಕುಮಾರಸ್ವಾಮಿ ಸೇರಿದಂತೆ ಸಮಾಜದ ಬಂಧುಗಳು ಪಾಲ್ಗೊಳ್ಳಲಿದ್ದಾರೆ.

**REQUIRED**

A Progressive "Agro Based Food processing industry" Seek the following employment.

1. H.R. Assistant : BSW/MSW (Fresher's)
2. Accounts Assistant : B.Com / MBA (Fresher's)

Candidates with computer knowledge and good communication skills, salary will commensurate with the qualification, experienced candidates can also apply.

The Manager - HR

**M/s. Green Agro Pack (P) Ltd.**
P.B. Road, Hebbalu Village, Davanagere (Tq & District)
Phone No. 8197446931, 9916260574
E-mail : hr@greenagro.com

**ನಗರಸಭಾ ಕಾರ್ಯಾಲಯ, ಹರಿಹರ–577601.**
ಫೋ:08192–244266 ಫ್ಯಾಕ್ಸ್:08192–241024
Website:www.hariharcity.mrc.gov.in.
E-mail ID no:itstaff_ulb_harihara@yahoo.com

ನಸಹ/ಶೇ.24.10/ಪೌಸಾ/ಸಿ.ಆರ್–01/2022–23 ದಿ: 18/07/2022.

**ದರಪಟ್ಟಿ ಪ್ರಕಟಣೆ**

ಹರಿಹರ ನಗರಸಭಾ ಕಾರ್ಯಾಲಯದ 2022–23 ನೇ ಸಾಲಿನ ಶೇ.24.10ರ ಸಾಮಾನ್ಯ ನಿಧಿ ಯೋಜನೆ ಮತ್ತು ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಪರಿಶಿಷ್ಠ ಪಂಗಡದ ಮಹಿಳೆಯರಿಗೆ ಹೊಲಿಗೆಯಂತ್ರ ಖರೀದಿಸಿ ವಿತರಿಸುವ ಕಾರ್ಯಕ್ರಮ, ಹಾಗೂ 2022–23ನೇ ಸಾಲಿನ ಶೇ.24.10 ರ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಹರಿಹರ ನಗರದ ವ್ಯಾಪ್ತಿಯಲ್ಲಿ ಮಾನ್ಯುವಲ್ ಸ್ಕ್ಯಾವೆಂಜರ್ ಕುಟುಂಬದ ಮಹಿಳಾ ಸದಸ್ಯರಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಖರೀದಿಸಿ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಡಿ ಹೊಲಿಗೆಯಂತ್ರಗಳನ್ನು ಸರಬರಾಜು ಮಾಡಲು ಇಚ್ಛಿಸುವ ಡೀಲರ್/ಅಧಿಕೃತ ಏಜೆನ್ಸಿದಾರರು ಈ ಕೆಳಗೆ ನಮೂದಿಸಿರುವ ನಮೂನೆಯಲ್ಲಿ ದಿನಾಂಕ: 29/07/2022 ಸಂಜೆ 4–00 ಗಂಟೆ ಒಳಗಾಗಿ ತಮ್ಮ ದರಗಳನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯನ್ನು ಪೌರಾಯುಕ್ತರು, ನಗರಸಭೆ, ಹರಿಹರ ರವರಿಗೆ ಸಲ್ಲಿಸತಕ್ಕದ್ದು. ಸಾಧ್ಯವಾದಲ್ಲಿ ಕೊಟೇಶನ್‌ಗಳನ್ನು ಅಂದೇ ತೆರೆಯಲಾಗುವುದು. ಸಮಯ ಮೀರಿ ಬಂದಂತಹ ಕೊಟೇಶನ್ / ಧರಪಟ್ಟಿಯನ್ನು ಅಂಗೀಕರಿಸಲಾಗುವುದಿಲ್ಲ.

**ಸರಬರಾಜು ಮಾಡುವ ಸಾಮಾಗ್ರಿಗಳ ವಿವರ:–**

ಹೊಲಿಗೆಯಂತ್ರ ಖರೀದಿ **Material: Cast Iron; Color: Black; Item Dimensions (L x W x H): 14.5 cm x 8.5 cm x 8.5 cm; Product Specification**

**(1) Pressure Adjustment- Screw type. (2) Motion of thread takeup lever- Cam motion. (3) Needle Bar Thread Guide- Curved type. (4) Needle Plate and slide plate- Hinged type. (5) Presser Foot- Heavy Shank. (6) Shuttle Race- Open Type. (7) Stitch Length Adjuster- Straught lever Type. Lever type stitch regulator. Auto tripping bobbin winder.** ನಮೂದಿಸಬೇಕಾದ ದರ:– 1 ಕ್ಕೆ

ವಾಸಾಇ/ಡಿವಿಜಿ/310/ ಎಂಸಿಎ/2022–23

ಸಹಿ/– ಪೌರಾಯುಕ್ತರು, ನಗರಸಭೆ, ಹರಿಹರ.

## ಅಮೃತ ಮಹೋತ್ಸವ: ಕುರುಬ ಸಮಾಜದ ಸಭೆ



ದಾವಣಗೆರೆ, ಜು. 25- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ 75ನೇ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲೆಯ 6 ತಾಲ್ಲೂಕುಗಳ ಸಮಸ್ತ ಕುರುಬ ಸಮಾಜದ ಎಲ್ಲಾ ಸಂಘ-ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳ ಬಳಗದಿಂದ ಕುರುಬ ಸಮಾಜದ ಪೂರ್ವಭಾವಿ ಸಭೆಯು ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು.

ಸಭೆಯಲ್ಲಿ ಮಾಜಿ ಮೇಯರ್ ಗೋಣೆಪ್ಪ, ಗೌಡ್ರ ಚನ್ನಬಸಪ್ಪ, ಬಳ್ಳಾರಿ ಷಣ್ಮುಖಪ್ಪ, ಹೆಚ್.ಜಿ.ಸಂಗಪ್ಪ, ಪಾಲಿಕೆ ಸದಸ್ಯ ಇಟ್ಟಿಗುಡಿ ಮಂಜುನಾಥ್, ಕುರುಬರ ಸಂಘದ ಉಪಾಧ್ಯಕ್ಷ ಹಾಲೇಕಲ್ಲು ಎಸ್.ಟಿ.ಅರವಿಂದ, ಕುರುಬರಕೇರಿ ಜಯಣ್ಣ, ನಿರ್ದೇಶಕರಾದ ಬಿ.ಲಿಂಗರಾಜು, ಕುಂದವಾಡ ಮಂಜಣ್ಣ, ಜಮ್ಮನಹಳ್ಳಿ ನಾಗರಾಜ್, ಕೆ.ರೇವಣಸಿದ್ದಪ್ಪ, ಎಲ್.ಬಿ. ಭೈರೇಶ್, ಬಿಳಿಚೋಡು ಓಮಣ್ಣ, ಹಾಲೇಕಲ್ಲು ವೀರಣ್ಣ, ಸಿದ್ದಲಿಂಗಪ್ಪ, ಚಂದ್ರು ದೀಟೂರು ಮತ್ತಿತರರಿದ್ದರು.

## ಹರಿಹರ ತಾ.ನಲ್ಲಿಂದು ಶ್ರೀಗಳ ಪ್ರವಾಸ



ದಾವಣಗೆರೆ ನಗರದಲ್ಲಿ ಆಗಸ್ಟ್ 1 ರಂದು ಹಮ್ಮಿಕೊಂಡಿರುವ ಶ್ರೀ ಸಿದ್ದರಾಮೇಶ್ವರ ದೇವರ 60ನೇ ವಜ್ರ ರಥೋತ್ಸವದ ಅಂಗವಾಗಿ ಚಿತ್ರದುರ್ಗ ಭೋವಿ ಗುರು ಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಹರಿಹರ ತಾಲ್ಲೂಕಿನಲ್ಲಿ ಇಂದು ಪ್ರವಾಸ ಕೈಗೊಂಡಿದ್ದಾರೆ.

ಬೆಳಿಗ್ಗೆ 9 ಗಂಟೆಗೆ ಹನಗವಾಡಿ, 9.30ಕ್ಕೆ ಷಂಷೀಪುರ, 10ಕ್ಕೆ ನಂದಿತಾವರೆ, 10.30ಕ್ಕೆ ಕುಣೆಬೆಳಕೆರೆ, 11.30ಕ್ಕೆ ಆದಾಪುರ, 12.30ಕ್ಕೆ ಕುಂಬಳೂರು, 1 ಗಂಟೆಗೆ ಮಲೇಬೆನ್ನೂರು, 2 ಕ್ಕೆ ಹಿಂಡಸಘಟ್ಟ, 3 ಕ್ಕೆ ಮೂಗಿನಗೊಂದಿ, 3.45ಕ್ಕೆ ಕೆ.ಎನ್.ಹಳ್ಳಿ, 4.30ಕ್ಕೆ ಹೊಳೆಸಿರಿಗೆರೆಗೆ ಶ್ರೀಗಳು ಭೇಟಿ ನೀಡಲಿದ್ದಾರೆಂದು ಭೋವಿ ಕುಮಾರ್ ತಿಳಿಸಿದ್ದಾರೆ.

## ಲಯನ್ಸ್ ವಲಯಾಧ್ಯಕ್ಷರಾಗಿ ಓಂಕಾರಪ್ಪ



ದಾವಣಗೆರೆ, ಜು.25- ಲಯನ್ಸ್ ಕ್ಲಬ್ ವಲಯಾಧ್ಯಕ್ಷರನ್ನಾಗಿ ಎಸ್.ಓಂಕಾರಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಲಯನ್ಸ್ ರಾಜ್ಯಪಾಲ ಡಾ.ಎಂ.ಕೆ. ಭಟ್ ತಿಳಿಸಿದ್ದಾರೆ.

## ಎಪಿಎಂಸಿ ದಲಾಲರಿಂದ ಭದ್ರಾ ಜಲಾಶಯಕ್ಕೆ ಬಾಗಿನ



ದಾವಣಗೆರೆ, ಜು.25- ನಗರದ ಎಪಿಎಂಸಿ ದಲಾಲರ ಸಂಘದ ಅಧ್ಯಕ್ಷ ಕಂಸಾಗರದ ಪಂಚಾಕ್ಷರಪ್ಪ ನೇತೃತ್ವದಲ್ಲಿ ದಲಾಲರು ಭದ್ರಾ ಜಲಾಶಯಕ್ಕೆ ತೆರಳಿ ಬಾಗಿನ ಅರ್ಪಿಸಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಮರಡಿ ರೇವಣಸಿದ್ಧಪ್ಪ, ನಂದಿಗಾವಿ ರಾಜಣ್ಣ, ಕೆ.ಜಿ. ಪ್ರಕಾಶ್, ಬುಳ್ಳಾಪುರದ ಮಲ್ಲಿಕಾರ್ಜುನ ಸ್ವಾಮಿ, ಎ.ಎಸ್. ಮಹೇಶ್ವರಯ್ಯ, ಆನೆಕೊಂಡದ ಪರಮೇಶ್ವರಪ್ಪ, ದೊಗ್ಗಳ್ಳಿ ಬಸವರಾಜ್, ಮಧು, ಕೆ.ಜಿ.ಎನ್. ಸುರೇಶ್, ಸಿಂಗ್ರಿಹಳ್ಳಿ ಷಣ್ಮುಖಪ್ಪ, ಮಾಗಾನಹಳ್ಳಿ ಸೋಮಣ್ಣ, ಶ್ರೀನಿವಾಸ, ದೇವೇಂದ್ರಪ್ಪ, ಜಾವಿದ್ ಸಾಬ್, ರಾಜಣ್ಣ, ಆರ್.ಜಿ. ರುದ್ರೇಶ್, ಎ.ಹೆಚ್.ಕೆ. ಶಿವಣ್ಣ, ಕಾವಲಹಳ್ಳಿ ಜಗದೀಶ್, ಬಾತಿ ಸದಾನಂದ ಮತ್ತಿತರರಿದ್ದರು.

## ನಗರದಲ್ಲಿ ಇಂದು ಶ್ರೀ ನಾಮದೇವರ ಪುಣ್ಯಾರಾಧನೆ



ನಾಮದೇವ ಸಿಂಪಿ ಸಮಾಜದಿಂದ ಸಂತ ಶ್ರೇಷ್ಠ ಶಿರೋಮಣಿ ಶ್ರೀ ನಾಮದೇವ ಮಹಾರಾಜರ 672ನೇ ಸಂಜೀವಿನಿ ಪುಣ್ಯಾರಾಧನೆ ಕಾರ್ಯಕ್ರಮವು ಇಂದು ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ವಿಠ್ಠಲ ಮಂದಿರದಲ್ಲಿ ನಡೆಯಲಿದೆ. ಇಂದು ಮುಂಜಾನೆ 5 ರಿಂದ ಸಂತ ಮಂಡಳಿಯವರಿಂದ ಭಜನೆ, ಕಾಕಡಾರತಿ. ಬೆಳಿಗ್ಗೆ 9 ಕ್ಕೆ ಸಂತರಿಂದ ಪ್ರವಚನ ಕಾರ್ಯಕ್ರಮ, ಬೆಳಿಗ್ಗೆ 10 ರಿಂದ ಸಂತ ಶ್ರೇಷ್ಠ ಶ್ರೀ ನಾಮದೇವ ಮಹಾರಾಜರ ಪಲ್ಲಕ್ಕಿ ಉತ್ಸವ ಹಾಗೂ ಗುಲಾಲ್ ಕಾರ್ಯಕ್ರಮ. ಮಧ್ಯಾಹ್ನ 12 ರಿಂದ ಪುಂಡಲೀಕರಾವ್ ಜ್ಞಾನಮೋಟೆ ಅವರಿಂದ ಕೀರ್ತನೆ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ ಜರುಗಲಿದೆ.

## ಲಯನ್ಸ್ ಕ್ಲಬ್ ದಾವಣಗೆರೆ ವಿದ್ಯಾನಗರದ ಅಧ್ಯಕ್ಷರಾಗಿ ನಿವೃತ್ತ ಶಿಕ್ಷಕ ಬಿ.ದಿಳ್ಯಪ್ಪ





ಲಯನ್ಸ್ ಕ್ಲಬ್ ದಾವಣಗೆರೆ ವಿದ್ಯಾನಗರದ ಅಧ್ಯಕ್ಷರಾಗಿ ನಿವೃತ್ತ ಶಿಕ್ಷಕ ಬಿ.ದಿಳ್ಯಪ್ಪ, ಕಾರ್ಯದರ್ಶಿಯಾಗಿ ಸಿ.ಹೆಚ್.ದೇವರಾಜ್, ಖಜಾಂಚಿಯಾಗಿ ಎಂ.ಎ. ಶೀತಲ್ ಕುಮಾರ್ ಆಯ್ಕೆಯಾಗಿದ್ದಾರೆ.

ವಿದ್ಯಾನಗರದಲ್ಲಿರುವ ಲಯನ್ಸ್ ಕ್ಲಬ್ ದಾವಣಗೆರೆ ವಿದ್ಯಾನಗರದ ಲಯನ್ಸ್ ಸೇವಾ ಭವನದಲ್ಲಿ ಇಂದು ಸಂಜೆ 7 ಗಂಟೆಗೆ ಏರ್ಪಾಡಾಗಿರುವ ಪದಗ್ರಹಣ ಸಮಾರಂಭದಲ್ಲಿ ಜಿಲ್ಲಾ ಲಯನ್ಸ್ ಖಜಾಂಚಿ ಕೆ.ಎಸ್. ವೇದಮೂರ್ತಿ ಅವರು ನೂತನ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸುವರು. ಎಂ.ಎ. ಸುದರ್ಶನ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸುವರು.


ಹಾರ್ದಿಕ ಅಭಿನಂದನೆಗಳು


ಬಿ.ಹೆಚ್.ಕೃಷ್ಣಾರೆಡ್ಡಿ
ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ– ಆಪರೇಟಿವ್ ಲಿ., ಕೋಲಾರ


ಎಂ.ಆರ್.ಪ್ರಭುದೇವ್
ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ.


ಎ.ಆರ್.ಪ್ರಸನ್ನಕುಮಾರ್
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ


ರಘುರಾಮ್ ರೆಡ್ಡಿ
ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ


ಬಿ.ಎಸ್.ಗುಂಡುರಾವ್
ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ನಗರ


ವಿಜಯ್ ಸಿ.ಪಿ.
ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಆಡಳಿತ ಮಂಡಳಿಗೆ ದಿನಾಂಕ: 24–07–2022ರಂದು ನಡೆದ ನಿರ್ದೇಶಕರ ಚುನಾವಣೆಯಲ್ಲಿ ಬೆಂಗಳೂರು ಪ್ರಾಂತ್ಯಕ್ಕೆ ಅತ್ಯಧಿಕ ಮತಗಳಿಂದ ಆಯ್ಕೆಯಾದ ನಮ್ಮ ಸಹಕಾರಿ ಧುರೀಣರುಗಳಿಗೆ ನಮ್ಮ ಒಕ್ಕೂಟದ ವತಿಯಿಂದ ಹಾರ್ದಿಕ ಅಭಿನಂದನೆಗಳು.


ಹೆಚ್.ಎಂ.ನಾಗರಾಜ್ ಅಧ್ಯಕ್ಷರು

ಉಮೇಶ್ ಶೆಟ್ಟಿ ಉಪಾಧ್ಯಕ್ಷರು

ಎಸ್.ಎಂ.ವೀರಯ್ಯ ನಿರ್ದೇಶಕರು

ಎ.ಸಿ.ಬಸವರಾಜ್ ನಿರ್ದೇಶಕರು

ಜಿ.ಎಂ.ರುದ್ರಗೌಡ ನಿರ್ದೇಶಕರು

ಕೆ.ಎಂ.ರವಿಶಂಕರ್ ನಿರ್ದೇಶಕರು

ಕೆ.ಹೆಚ್.ಶಿವಯೋಗಪ್ಪ ನಿರ್ದೇಶಕರು

ಹೆಚ್.ಎಂ.ಈಶಪ್ರಸಾದ ನಿರ್ದೇಶಕರು

ಟಿ.ಎಂ.ಪಾಲಕ್ಷ ನಿರ್ದೇಶಕರು

ಜಿ.ಬಿ.ಚಂದ್ರಶೇಖರಪ್ಪ ನಿರ್ದೇಶಕರು

ಎಸ್.ಟಿ.ವೀರೇಶ್ ನಿರ್ದೇಶಕರು

ಎನ್.ಬಿ.ವಿಜಯಕುಮಾರ್ ನಿರ್ದೇಶಕರು

ಕೆ.ಆರ್.ದ್ಯಾವಪ್ಪ ನಿರ್ದೇಶಕರು

ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಹಾಗೂ ದಾವಣಗೆರೆ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು.



JGi

JAIN PUBLIC SCHOOL , DAVANGERE
No.323, Avaragere Village, Bada Cross
Near Shree Veereshwara Punyashrama, Davangere - 577003
Affiliated To CBSE, NEW DELHI, No.: 830459
Web : www.jpsdvgrs.in , Email : jpsdvg2008@gmail.com

Hearty Congratulations on your
'Erudite' of JPS Glorious Achievement !!!!!
100% Result

We Endeavored, We Progressed, We Conquered!


MOHAMMED IRBAAZ
92%


SYED UMER KHALEEL
90%


PUNIT VENKATESH RATHOD
88%


RAJEEV S BENALMATH
84%


UMASHANKAR B J
82%

The Management, Principal, Teaching & Non Teaching Staff are immensely proud to announce the X CBSE Board Examination Results!

Contact: 9844443223 , 7378392875


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte